MANUVIKASA

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ

# ಮನುವಿಕಾಸ ವಾರ್ತಾಪತ್ರ

ಸಂಪಾದಕರು : ಗಣಪತಿ ಭಟ್ಟ, ಕರ್ಜಗಿ

EdelGive Foundation
An Edelweiss Initiative

ಸಂಪುಟ - 4 ಸಂಚಿಕೆ - 2

ಖಾಸಗಿ ಪ್ರಸಾರಕ್ಕಾಗಿ ಮಾತ್ರ

ಸಂಪಾದಕೀಯ ಮಂಡಳಿ : ಶ್ರೀಮತಿ ಶುಭಾ ಪೈ । ಗಣಪತಿ ಹೆಗಡೆ । ಪವನ ಬೊಮ್ಮನಹಳ್ಳಿ । ಶಿಲ್ಪಾ ಶಾಸ್ತ್ರಿ



## ಮನುವಿಕಾಸ ಸಂಸ್ಥೆಯಿಂದ ಶಿರಸಿಯಲ್ಲಿ ಕೆರೆ ಸಮಾವೇಶ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಅಜೀಂ ಪ್ರೇಮ್‌ಜಿ ಫೌಂಡೇಶನ್ ಸಹಯೋಗದೊಂದಿಗೆ ದಿನಾಂಕ 18–10–2021 ರಂದು ಶಿರಸಿಯ ರಾಘವೇಂದ್ರ ಕಲ್ಯಾಣ ಮಂಟಪದ ಸಭಾಭವನದಲ್ಲಿ ಕೆರೆ ಸಮಾವೇಶ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಸಮಾವೇಶವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕಾರ್ಮಿಕ ಸಚಿವರಾದ ಸನ್ಮಾನ್ಯ ಶ್ರೀ ಶಿವರಾಮ ಹೆಬ್ಬಾರರವರು “ಮನುವಿಕಾಸ ಸ್ವಯಂಸೇವಾ ಸಂಸ್ಥೆಯು ಕಳೆದ ಎರಡು ದಶಕದ ಹಿಂದೆ ಪ್ರಾರಂಭವಾದ ಚಿಕ್ಕ ಸಂಸ್ಥೆಯಾಗಿದ್ದು, ತನ್ನ ಕಾರ್ಯ ವೈಖರಿಯಿಂದ ಇಂದು ತಳಮಟ್ಟದ ಜನ ಸಮುದಾಯವನ್ನು ತಲುಪಿದೆ. ರೈತಾಪಿ ವರ್ಗಕ್ಕೆ ಮನುವಿಕಾಸ ನೀಡಿದ ಕೊಡುಗೆ ಅಪಾರವಾಗಿದ್ದು ನೀರಿನ ದಾಹವನ್ನು ನೀಗಿಸಿದೆ. ದೇಶದಲ್ಲಿ ಅನ್ನದಾತ ಮತ್ತು ಸೈನಿಕ ಈ ಇಬ್ಬರನ್ನು ಸಮಾಜ ಬಹಳ ಗೌರವದಿಂದ ಕಾಣಲು ಈ ಎರಡು ಸಮುದಾಯಗಳು ಜನಸಮುದಾಯದ ಭದ್ರತೆಗೆ ನೀಡಿರುವ ಕೊಡುಗೆಗಳೇ ಸಾಕ್ಷಿಯಾಗಿವೆ. ಕೋವಿಡ್–19 ರ ತುರ್ತು ಸಮಯದಲ್ಲಿ ರಾಷ್ಟ್ರವ್ಯಾಪಿ ಲಾಕ್‌ಡೌನ್ ಸಮಯದಲ್ಲಿ ಉಳಿದ ಎಲ್ಲ ಸ್ತರದ ಸಮುದಾಯಗಳು ಕೆಲಸವನ್ನು ನಿಲ್ಲಿಸಿದ್ದರೂ ರೈತಾಪಿ ಕುಟುಂಬ ಮಾತ್ರ ತನ್ನ ಕಸುಬನ್ನು ಬಿಟ್ಟು ಕೂತಿರಲಿಲ್ಲ. ಅವರ ಪರಿಶ್ರಮವನ್ನು ಮನಗಂಡು ಮನುವಿಕಾಸ ಸಂಸ್ಥೆಯು ಚಟುವಟಿಕೆಗಳನ್ನು ರೂಪಿಸಿದ್ದು, ಸಂಸ್ಥೆ ಅವರಿಗೆ ಅತ್ಯಾವಶ್ಯಕವಾದ ಜೀವಜಲದ ಪೂರೈಕೆಯನ್ನು ಮಾಡಿದ್ದು ನಿಜವಾಗಿಯೂ ಶ್ಲಾಘನೀಯವೇ ಸರಿ, ಕೆರೆಗಳ ಪುನರುಜ್ಜೀವನದ ಜೊತೆಗೆ ರೈತರ ಬೆಳೆಗಳಲ್ಲಿ ಬದಲಾವಣೆ, ಆರ್ಥಿಕ ಅಭಿವೃದ್ಧಿಯ ಜೊತೆಗೆ ಜೀವನಮಟ್ಟ ಸುಧಾರಣೆ ಮಾಡಿದ ಕೀರ್ತಿ ಮನುವಿಕಾಸಕ್ಕೆ ಸಲ್ಲುತ್ತದೆ. ನಮ್ಮಲ್ಲಿಯ ಪೂರ್ವ ಭಾಗದ ರೈತರಿಗೆ ದೊಡ್ಡ ಕೆರೆಗಳ ಪುನರುಜ್ಜೀವನದಿಂದ ಮನುವಿಕಾಸ ಸಂಸ್ಥೆಯು ರೈತರ ಜೀವನಾಡಿಯಾಗಿದೆ. ಇದಲ್ಲದೆ ಸಮಾಜದ ಹಲವು ದುರ್ಬಲ ಸಮುದಾಯಗಳಿಗೆ ಮನುವಿಕಾಸವು ಹಲವಾರು ಅಭಿವೃದ್ಧಿಪರ ಕಾರ್ಯ

3...

## ಮನುವಿಕಾಸ ಸಂಸ್ಥೆಯಿಂದ ಮಹಿಳೆಯರಿಗಾಗಿ ಬಮ್ಮಿಗಟ್ಟಿಯಲ್ಲಿ ಸುಸ್ಥಿರ ಕೃಷಿ ಅಭಿವೃದ್ಧಿ ತರಬೇತಿ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಅಜೀಂ ಪ್ರೇಮ್‌ಜಿ ಫೀಲಾಂತ್ರಫಿಕ್ ಇನಿಶಿಯೇಟಿವ್ ಸಹಯೋಗದೊಂದಿಗೆ ಧಾರವಾಡ ಜಿಲ್ಲೆಯ ಬಮ್ಮಿಗಟ್ಟಿಯಲ್ಲಿನ ಅಕ್ಕಮಹಾದೇವಿ ದೇವಸ್ಥಾನದ ಆವರಣದಲ್ಲಿ 5–09–2021 ರಂದು ರೈತ ಮಹಿಳೆಯರಿಗಾಗಿ ಒಂದು ದಿನದ ಸುಸ್ಥಿರ ಕೃಷಿ ಅಭಿವೃದ್ಧಿ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡಿತ್ತು

ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಧಾರವಾಡದ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳಾದ ಡಾ. ಬಿರಾದಾರ್ “ಮನುಕುಲವು ನೈಸರ್ಗಿಕ ಸಂಪನ್ಮೂಲಗಳ ಸದುಪಯೋಗ ಪಡೆದುಕೊಳ್ಳಬೇಕು, ಕೃಷಿ ಜನರ ಜೀವನಾಧಾರವಾಗಿದ್ದು ಅದರಲ್ಲಿ ಸುಸ್ಥಿರತೆ ಸಾಧಿಸಲು ಹಲವಾರು ಕೊರತೆಗಳಿವೆ. ಅದಕ್ಕೆ ಮೂಲ ಕಾರಣ ತಂತ್ರಜ್ಞಾನದ ಕೊರತೆ, ನೆಲದಲ್ಲಿ ಅತಿಯಾದ ರಾಸಾಯನಿಕಗಳ ಬಳಕೆಯಿಂದ ಫಲವತ್ತತೆಯ ಜೊತೆಗೆ ಜಮೀನಿನಲ್ಲಿ ಇಳುವರಿಯೂ ಕಡಿಮೆಯಾಗುತ್ತಿದೆ. ಹಾಗಾಗಿ ತಂತ್ರಜ್ಞಾನದ ಜೊತೆಗೂಡಿ ಸಾವಯವ ಕೃಷಿ ಪದ್ಧತಿಯನ್ನು ಮೈಗೂಡಿಸಿಕೊಂಡಾಗ ಮಾತ್ರ ಕೃಷಿಯಲ್ಲಿ ಸುಸ್ಥಿರತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಕಾಲ ಕಾಲಕ್ಕೆ ಮಣ್ಣಿನ ಪರೀಕ್ಷೆ, ಪ್ರಕೃತಿಯ ಜೊತೆಗೂಡಿ ಕೃಷಿಯನ್ನು ಮುಂದುವರೆಸುವ ಗುಣವನ್ನು ಇಂದಿನ ರೈತ ಸಮುದಾಯ ರೂಢಿಸಿಕೊಳ್ಳಬೇಕು. ನೀರಿನ ಸದ್ಬಳಕೆ, ನೀರಿಂಗಿಸುವಿಕೆ, ಸಮಗ್ರ ಜಾನುವಾರು ನಿರ್ವಹಣೆ ಮತ್ತು ಜೇನು ಸಾಕಣೆ ಇತ್ಯಾದಿ ಉಪಕಸಬುಗಳನ್ನು ಮಾಡುವದರ ಮೂಲಕ ಕೃಷಿಯನ್ನು ಅಳವಡಿಸಿಕೊಳ್ಳಬೇಕು. ಕೃಷಿಯ ಜೊತೆ ಜೊತೆಗೆ ಅರಣ್ಯ ಅಭಿವೃದ್ಧಿಯೂ ಆಗಬೇಕು. ಆರೋಗ್ಯದ ಕಡೆಯೂ ಸರಿಯಾದ ಗಮನ ಹರಿಸಬೇಕು. ಸಮಗ್ರ ಕೃಷಿ ಪದ್ಧತಿಯ ಪರಿಕಲ್ಪನೆ ಎಲ್ಲರಲ್ಲಿಯೂ ಮೂಡಿದಾಗ ಮಾತ್ರ ಸುಸ್ಥಿರ ಕೃಷಿಯಲ್ಲಿನ ಅಭಿವೃದ್ಧಿ ಸಾಧ್ಯ” ಎಂದರು. ವಿವಿಧ ರೀತಿಯ ಬೆಳೆಗಳು ಮತ್ತು ಅದಕ್ಕೆ ಬರುವ ರೋಗಗಳು ಮತ್ತು ಪರಿಹಾರೋಪಾಯಗಳನ್ನು ಈ ತರಬೇತಿ ಕಾರ್ಯಾಗಾರದಲ್ಲಿ ತಿಳಿಸಿಕೊಡಲಾಯಿತು.

4...



# ಸಂಪಾದಕೀಯ



ಆತ್ಮೀಯ ಓದುಗರೆ...

ಮನುವಿಕಾಸದ ಈ ನೂತನ ಸಂಚಿಕೆಯನ್ನು ತಮ್ಮ ಮುಂದಿಡಲು ನನಗೆ ಅತೀವ ಸಂತಸವೆನಿಸುತ್ತಿದೆ. ಕರೋನಾ ಲಾಕ್ ಡೌನ್ ನಿಂದ ದೇಶ ಮುಕ್ತವಾದರೂ ಸಹ ಅದರ ಪ್ರಭಾವ ಮಾತ್ರ ಇನ್ನೂ ಆರ್ಥಿಕತೆಯ ಮೇಲೆ ಸದಾ ಕರಿ ನೆರಳಿನಂತೆ ಕಾಡುತ್ತಲೇ ಇದೆ. ಆದರೂ ಮನುವಿಕಾಸ ಸಂಸ್ಥೆ ತನ್ನ ಸಮಾಜಮುಖಿ ಕೆಲಸದಲ್ಲಿ ಸದಾ ಮುಂದಿದ್ದು ತಳಮಟ್ಟದ ಜನಸಮುದಾಯವನ್ನು ತಲುಪಿ ಅವರ ಅಭಿವೃದ್ಧಿಗೆ ಸಾಕಷ್ಟು ಬೆಂಬಲ ಮತ್ತು ಸಹಾಯ ಮಾಡಿದೆ.

ಈಗಾಗಲೇ ಮನುವಿಕಾಸ ಸಂಸ್ಥೆ 145ಕ್ಕೂ ಹೆಚ್ಚು ದೊಡ್ಡ ಕೆರೆಗಳನ್ನು ಪುನರುಜ್ಜೀವನಗೊಳಿಸಿದ್ದು, ಉತ್ತರ ಕನ್ನಡ, ಹಾವೇರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳ ರೈತಾಪಿ ವರ್ಗ ಇದರ ಪ್ರಯೋಜನ ಪಡೆದಿದೆ ಕೆರೆಗಳ ಮಹತ್ವ ಮತ್ತು ಅದರಿಂದಾಗುವ ಆರ್ಥಿಕ ಸಬಲತೆಯ ಕುರಿತಾಗಿ ಚರ್ಚಿಸಲು ಮನುವಿಕಾಸ ಸಂಸ್ಥೆ ಮತ್ತು ಅಜ಼ೀಂ ಪ್ರೇಮ್ ಜಿ ಫಿಲಾಂತ್ರಪಿಕ್ ಇನಿಶಿಯೇಟಿವ್ ಸಹಯೋಗದಲ್ಲಿ ಕೆರೆ ಸಮಾವೇಶ ಕಾರ್ಯಕ್ರಮವನ್ನು ಉತ್ತರ ಕನ್ನಡ ಜಿಲ್ಲೆಯ ಶಿರಸಿ ಮತ್ತು ಧಾರವಾಡ ಜಿಲ್ಲೆಯ ಕಲಘಟಗಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಕರ್ನಾಟಕ ಸರಕಾರದ ಕಾರ್ಮಿಕ ಸಚಿವರು ಮತ್ತು ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರಾದ ಶ್ರೀ ಶಿವರಾಮ ಹೆಬ್ಬಾರ್, ಕಲಘಟಗಿ ಕ್ಷೇತ್ರದ ಶಾಸಕರಾದ ಶ್ರೀ ಸಿ. ಎಮ್. ನಿಂಬಣ್ಣವರ್ ಸೇರಿದಂತೆ ಹಲವು ಗಣ್ಯರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕೆರೆಗಳ ಪುನರುಜ್ಜೀವನದಿಂದ ಲಾಭ ಪಡೆದ ರೈತರ ಅಭಿಪ್ರಾಯ ಸಂಗ್ರಹ ಮತ್ತು ಮುಂಬರುವ ದಿನಗಳಲ್ಲಿ ಹೊಸ ಕೆರೆಗಳ ಪುನಶ್ಚೇತನ ಮೊದಲಾದ ಮಾಹಿತಿ ವಿನಿಮಯಕ್ಕೆ ಈ ಕಾರ್ಯಕ್ರಮ ಸಾಕ್ಷಿಯಾಗಿದ್ದು, ಅದರ ವಿವರಗಳು ಒಳಪುಟಗಳಲ್ಲಿವೆ.

ಕೋವಿಡ್-19ರ ತುರ್ತು ಸಂದರ್ಭದಲ್ಲಿ ಹಲವಾರು ಜನಪರ ಕೆಲಸಗಳ ಮೂಲಕ ತಳಮಟ್ಟದ ಜನಸಮುದಾಯವನ್ನು ತಲುಪಿರುವ ಮನುವಿಕಾಸ ಸಂಸ್ಥೆ ಈಗ ಅಜ಼ೀಂ ಪ್ರೇಮ್‌ಜಿ ಫೌಂಡೇಶನ್ನಿನ ಸಹಯೋಗದಲ್ಲಿ ಕೋವಿಡ್ ಲಸಿಕಾ ಅಭಿಯಾನದಲ್ಲಿ ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಉಚಿತ ವಾಹನ ವ್ಯವಸ್ಥೆಯನ್ನು ಕಲ್ಪಿಸಿದ್ದು ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಸಾಧ್ಯವಾಗದ ಮತ್ತು ದುರ್ಗಮ ಪ್ರದೇಶಗಳ ಜನರಿಗೆ ಇದು ಅನುಕೂಲವನ್ನು ಮಾಡಿಕೊಟ್ಟಿದೆ. ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರದ ಅಡಿಯಲ್ಲಿ ಜಿಲ್ಲೆಯ ಎಲ್ಲ ತಾಲೂಕುಗಳಲ್ಲಿ ಸಮುದಾಯ ಆರೋಗ್ಯ ಅಧಿಕಾರಿಗಳು ಮತ್ತು ಕ್ಷೇತ್ರ ಮಟ್ಟದಲ್ಲಿ ಸ್ವಯಂ ಸೇವಕರನ್ನು ನೇಮಕ ಮಾಡಿದೆ. ಜೊತೆಗೆ ಅವರಿಗೆ ಸೂಕ್ತ ತರಬೇತಿಗಳನ್ನು ಸಹ ನೀಡಿದೆ. ಅದರ ಬಗೆಗಿನ ವಿವರಗಳನ್ನು ಸಂಚಿಕೆ ಒಳಗೊಂಡಿದೆ.

ಈಡಲ್‌ಗೀವ್ ಫೌಂಡೇಶನ್ನಿನ ಸಹಯೋಗದೊಂದಿಗೆ ಈಗಾಗಲೇ ಹಲವಾರು ಮಹಿಳಾ ಅಭಿವೃದ್ಧಿಪರ ಚಟುವಟಿಕೆಗಳನ್ನು ರೂಪಿಸಿ ಮಹಿಳಾ ಸ್ವ ಉದ್ಯಮಶೀಲ ಬೆಳವಣಿಗೆಯಲ್ಲಿ ತೊಡಗಿರುವ ಮನುವಿಕಾಸ ಸಂಸ್ಥೆ ಪ್ರಸಕ್ತ ತ್ರೈಮಾಸಿಕದಲ್ಲಿಯೂ ಸಹ ಹಲವಾರು ಮಹಿಳಾ ಕೌಶಾಲ್ಯಾಭಿವೃದ್ಧಿ ಚಟುವಟಿಕೆಗಳಾದ ಹೊಲಿಗೆ ತರಬೇತಿ, ಬ್ಯೂಟಿಶಿಯನ್ ತರಬೇತಿ, ಕ್ಯಾಟರಿಂಗ್ ತರಬೇತಿ, ಹೈನುಗಾರಿಕೆ, ಸುಸ್ಥಿರ ಕೃಷಿ ಅಭಿವೃದ್ಧಿ ತರಬೇತಿಗಳನ್ನು ತನ್ನ ಕಾರ್ಯಚಟುವಟಿಕೆಯ ಕ್ಷೇತ್ರಗಳಲ್ಲಿ ಹಮ್ಮಿಕೊಂಡಿದ್ದು ಅದರ ಎಲ್ಲ ವಿವರಗಳು ಈ ಹೊತ್ತಿಗೆಯಲ್ಲಿ ಅಡಕವಾಗಿವೆ.

ಮನುವಿಕಾಸ ಸಂಸ್ಥೆ ಜರ್ಮನಿಯ ಹನ್ಸ್ ಸೀಡಲ್ ಫೌಂಡೇಶನ್ ಇಂಡಿಯಾ ಅವರ ಸಹಯೋಗದೊಂದಿಗೆ ಹವಾಮಾನ ಬದಲಾವಣೆ, ರೈತರ ಬೆಳೆಗಳ ನಿರ್ವಹಣೆ ಮೊದಲಾದ ವಿಷಯಗಳ ಬಗೆಗೆ ರೈತ ಸಮುದಾಯದ ಆಗು ಹೋಗುಗಳ ಬಗೆಗೆ ಚರ್ಚಿಸಲು ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ತರಬೇತಿಗಳನ್ನು ಹಲವು ಜಿಲ್ಲೆಗಳಲ್ಲಿ ಆಯೋಜಿಸಿತ್ತು ಅದರ ಸಮಗ್ರ ವಿವರಗಳನ್ನು ಈ ಸಂಚಿಕೆ ಒಳಗೊಂಡಿದೆ.

ಮನುವಿಕಾಸ ಸಂಸ್ಥೆಯ ಅಂಗ ಸಂಸ್ಥೆಯಾದ ಪ್ರಗತಿಮಿತ್ರ ಸೌಹಾರ್ದ ಸಹಕಾರಿ ನಿಯಮಿತ ಮತ್ತು ಪ್ರಗತಿಮಿತ್ರ ರೈತ ಉತ್ಪಾದಕ ಸಂಘ ಪ್ರಸಕ್ತ ವರ್ಷದಲ್ಲಿ ಹಲವಾರು ಮೈಲುಗಲ್ಲುಗಳನ್ನು ಸಾಧಿಸಿವೆ. ಪ್ರತಿಷ್ಠಿತ 'ಕೃಷಿ ಅಲರ್ಟ್' ಪ್ರಶಸ್ತಿಯನ್ನು ಮುಡಿಗೇರಿಸಿಕೊಳ್ಳುವದರ ಜೊತೆಗೆ ಹಲವು ರೈತಪರ ಕಾರ್ಯಚಟುವಟಿಕೆಗಳಾದ ತೆಂಗಿನಕಾಯಿ ವ್ಯಾಪಾರ, ಹಸಿ ಮತ್ತು ಒಣ ಅಡಿಕೆ ಸುಲಿಯುವಿಕೆ, ಸಂಸ್ಕರಣೆ ಮತ್ತು ವ್ಯಾಪಾರ ಮತ್ತು ಅತ್ಯುತ್ತಮ ಗುಣಮಟ್ಟದ ಕಿರಾಣಿ ವಸ್ತುಗಳ ಮಳಿಗೆಗಳ ಪ್ರಾರಂಭವನ್ನು ಮಾಡಿದೆ. ಅವರ ಈ ಸಾಧನೆಗೆ ಈ ಮೂಲಕ ಅಭಿನಂದನೆ ಹೇಳಲು ಬಯಸುತ್ತೇನೆ.

ಮನುವಿಕಾಸ ಸಂಸ್ಥೆ ಫೌಂಡೇಶನ್ ಫಾರ್ ಇಕಾಲಾಜಿಕಲ್ ಸೆಕ್ಯುರಿಟಿ (ಎಫ್.ಇ.ಎಸ್.) ಸಂಸ್ಥೆಯ ಸಹಯೋಗದೊಂದಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಮುದಾಯ ಆಸ್ತಿಗಳನ್ನು ಗುರುತಿಸಿ ಅದನ್ನು ನಕ್ಷೀಕರಣಗೊಳಿಸಿ, ಸಂರಕ್ಷಿಸುವ ಹೊಸ ಯೋಜನೆಗೆ ಮುನ್ನುಡಿ ಬರೆದಿದೆ.

ಮನುವಿಕಾಸ ಸಂಸ್ಥೆ ಗೀವ್ ಇಂಡಿಯಾ ಮತ್ತು ಅಜ಼ೀಂ ಪ್ರೇಮ್‌ಜಿ ಫೀಲಾಂತ್ರಪಿಕ್ ಇನಿಶಿಯೇಟಿವ್ ಸಂಸ್ಥೆಗಳ ಸಹಯೋಗದೊಂದಿಗೆ ರೈತರ ಜಲದಾಹವನ್ನು ನೀಗಿಸುವ ನಿಟ್ಟಿನಲ್ಲಿ ಕೃಷಿ ಹೊಂಡಗಳ ನಿರ್ಮಾಣವನ್ನು ಮಾಡಿದೆ. ಗೀವ್ ಇಂಡಿಯಾದ ಸಹಯೋಗದೊಂದಿಗೆ ಅನಾಥರು, ನಿರ್ಗತಿಕರು, ಬಡವರು ಮತ್ತಿತರ ವರ್ಗದ ಜನರಿಗೆ ಅಗತ್ಯ ದಿನಸಿ ಸಾಮಾಗ್ರಿಗಳ ಹಂಚಿಕೆಯನ್ನು ಕೂಡ ಸಂಸ್ಥೆ ಮಾಡಿದೆ.

ಮನುವಿಕಾಸವು ಈಗಾಗಲೇ ಪ್ರಾರಂಭಿಸಿರುವ 'ಗೋಕರ್ಣ ತರಕಾರಿ ಬೆಳೆಗಾರರ ರೈತ ಉತ್ಪಾದಕ ಸಂಘ' ಮತ್ತು 'ಉತ್ತರ ಕನ್ನಡ ಜಿಲ್ಲಾ ಮಹಿಳಾ ಮೀನು ಮಾರಾಟಗಾರರ ಹಾಗೂ ಉತ್ಪಾದಕರ ಸಂಘ' ಇವುಗಳು ಕೂಡ ತರಕಾರಿ, ಬೀಜಗಳು ಮತ್ತು ಸಾವಯವ ಗೊಬ್ಬರಗಳ ಮಾರಾಟದಂತಹ ರೈತಪರ ಕಾರ್ಯಚಟುವಟಿಕೆಗಳನ್ನು ರೂಪಿಸಿದ್ದು, ಅವುಗಳನ್ನು ಯಶಸ್ವಿಯಾಗಿ ಪೂರೈಸಿವೆ ಮತ್ತು ಇನ್ನೂ ಹತ್ತು ಹಲವಾರು ಕ್ರಿಯಾಶೀಲ ಯೋಜನೆಗಳನ್ನು ಕೈಗೆತ್ತಿಕೊಂಡಿವೆ.

'ಹನಿ ಹನಿ ಸೇರಿ ಹಳ್ಳ ತೆನೆ ತೆನೆ ಸೇರಿ ಬಳ್ಳ' ಅನ್ನುವ ಮಾತಿದೆ. ಹಾಗೆಯೇ ಈ ಎಲ್ಲ ನಮ್ಮ ಕಾರ್ಯಚಟುವಟಿಕೆಗಳಿಗೆ ಬೆನ್ನೆಲುಬಾಗಿ ನಿಂತು ನಮಗೆ ಮಾರ್ಗದರ್ಶನ ಮಾಡಿದ ನಮ್ಮ ಸಂಸ್ಥೆಯ ನಿರ್ದೇಶಕ ಮಂಡಳಿಯ ಎಲ್ಲ ಸದಸ್ಯರಿಗೆ, ನಮ್ಮ ಜನಪರ ಚಟುವಟಿಕೆಗಳಿಗೆ ಆರ್ಥಿಕ ಸಹಾಯವನ್ನು ನೀಡಿ ಬೆಂಬಲಿಸಿದ ಎಲ್ಲ ಅನುದಾನಿತ ಸಂಸ್ಥೆಗಳಿಗೆ ಮತ್ತು ಅವಿರತ ಸವಾಲುಗಳ ನಡುವೆಯೂ ಪ್ರಯತ್ನವನ್ನು ಬಿಡದೆ ನಮ್ಮ ಕೆಲಸವನ್ನು ನಿರ್ವಹಿಸಿ ಸಂಸ್ಥೆಯನ್ನು ಇನ್ನೂ ಸಬಲಗೊಳಿಸಲು ನೆರವಾದ ನಮ್ಮ ಸಂಸ್ಥೆಯ ಎಲ್ಲ ಸಿಬ್ಬಂದಿಗಳಿಗೂ ನಾನು ಈ ಮೂಲಕ ಅಭಿನಂದನೆ ಸಲ್ಲಿಸುತ್ತೇನೆ.

ಸಮಾಜದ ಎಲ್ಲ ಸಮುದಾಯಗಳ ಅಭಿವೃದ್ಧಿಯಾದಾಗ ಮಾತ್ರ ದೇಶದ ಸಮಗ್ರ ಅಭಿವೃದ್ಧಿ ಸಾಧ್ಯ ಎಂದು ನಂಬಿರುವ ನಮ್ಮ ಸಂಸ್ಥೆಗೆ ನಿಮ್ಮ ಅನಿಸಿಕೆ ಮತ್ತು ಅಭಿಪ್ರಾಯಗಳು ಬಹಳ ಮುಖ್ಯ. ನಿಮ್ಮ ಸಲಹೆ ಸೂಚನೆಗಳು ನಮಗೆ ಮುನ್ನೆಡೆಯಲು ದಾರಿದೀಪ.

ಧನ್ಯವಾದಗಳೊಂದಿಗೆ,

ಶ್ರೀ ಗಣಪತಿ ಭಟ್ಟ
ನಿರ್ದೇಶಕರು, ಮನುವಿಕಾಸ

... 1ನೇ ಪುಟದಿಂದ

ಚಟುವಟಿಕೆಗಳನ್ನು ರೂಪಿಸಿ ಯಶಸ್ಸನ್ನು ಕಂಡಿದೆ. ಸಂಸ್ಥೆಗೆ ಸರಕಾರದಿಂದ ಸಹಕಾರವನ್ನು ಸದಾ ನೀಡಿದ್ದು, ಮುಂಬರುವ ದಿನಗಳಲ್ಲೂ ಇದು ಮುಂದುವರಿಯಲಿದೆ. ಸಂಸ್ಥೆಯ ಕಾರ್ಯಗಳಿಗೆ ಈಗಾಗಲೇ ಹಲವು ಜಿಲ್ಲೆಗಳ ಮನ್ನಣೆ ದೊರೆತಿದ್ದು ಅದರ ಕಾರ್ಯಕ್ಷೇತ್ರದ ವ್ಯಾಪ್ತಿ ಇನ್ನೂ ಮುಂದುವರೆಯಲಿ ಎಂದು ಹಾರೈಸುತ್ತೇವೆ. ನೀರಿನ ಅಭಾವವಿರುವಂತಹ ಮುಂಡಗೋಡ ತಾಲೂಕಿನಲ್ಲಿ ಹಲವು ಕೆರೆಗಳನ್ನು ಹೂಳೆತ್ತುವ ಮೂಲಕ ನಿರಂತರವಾಗಿದ್ದ ನೀರಿನ ದಾಹವನ್ನು ನೀಗಿಸಿದೆ.ಇದು ಮನುವಿಕಾಸ ಸಂಸ್ಥೆಯ ಪರಿಶ್ರಮಕ್ಕೆ ತಕ್ಕ ಫಲ ಸಿಕ್ಕಂತಾಗಿದೆ ಎಂದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿ ಮಾತನಾಡಿ "ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಕಳೆದ 18 ವರ್ಷಗಳಿಂದ ನೆಲ–ಜಲ ಸಂರಕ್ಷಣೆ, ಪರಿಸರ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ಹಲವಾರು ಕಾರ್ಯಚಟುವಟಿಕೆಗಳನ್ನು ರೂಪಿಸಿದ್ದು, ಈಗಾಗಲೇ ಉತ್ತರ ಕನ್ನಡ, ಹಾವೇರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅವಸಾನದ ಅಂಚಿನಲ್ಲಿರುವ ಕೆರೆಗಳನ್ನು ಪುನರುಜ್ಜೀವನಗೊಳಿಸಿ ರೈತ ಸಮುದಾಯದ ನೀರಿನ ದಾಹವನ್ನು ನೀಗಿಸಿದೆ. 3000ಕ್ಕೂ ಹೆಚ್ಚು ಸಣ್ಣ ಕೃಷಿ ಹೊಂಡಗಳ ನಿರ್ಮಾಣದಿಂದ ನೀರಿನ ನಿಶ್ಚಿಂತೆಗೆ ಕಾರಣವಾಗಿದೆ. ಮಹಿಳಾ ಸಬಲೀಕರಣವನ್ನೇ ಮುಖ್ಯ ಗುರಿಯಾಗಿಸಿಕೊಂಡು ಕೆಲಸ ಮಾಡುತ್ತಿರುವ ನಮ್ಮ ಸಂಸ್ಥೆ, ಮಹಿಳೆಯರು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ಬೇಕಾದ ಕೌಶಲ್ಯ ಆಧಾರಿತ ತರಬೇತಿಗಳನ್ನು ಆಯೋಜಿಸಿ ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಕೋವಿಡ್ ಲಸಿಕೆಯನ್ನು ಎಲ್ಲ ಸ್ತರದ ಸಮುದಾಯಗಳಿಗೆ ಸರಿಯಾದ ರೀತಿಯಲ್ಲಿ ತಲುಪಿಸುವ ನಿಟ್ಟಿನಲ್ಲಿ ಈಗಾಗಲೇ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಉಚಿತ ವಾಹನ ಸೇವೆಯನ್ನು ಜನರಿಗಾಗಿ ಸಂಸ್ಥೆ ಒದಗಿಸಿದೆ, ಅದರ ಪ್ರಯೋಜನವನ್ನು ಜನಸಮುದಾಯ ಪಡೆದಿದೆ. ಕೆರೆಗಳ ಪುನರುಜ್ಜೀವನ ಮತ್ತು ನೆಲ ಜಲ ಸಂರಕ್ಷಣೆ ಮೂಲಕ ಮನುಕುಲಕ್ಕೆ ಅಗತ್ಯವಾದ ಜೀವ ಜಲವನ್ನು ಜನರಿಗೆ ಪೂರೈಸಿದೆ. ಹಲವಾರು ಬಾರಿ ಸಂಸ್ಥೆಗೆ ಹಲವು ದುಸ್ತರ ಸಮಸ್ಯೆಗಳು ಎದುರಾದರೂ ಪರಿಶ್ರಮವನ್ನು ಬಿಡದೇ ಸಂಸ್ಥೆ ತನ್ನ ಕಾರ್ಯವನ್ನು ಸಾಧಿಸಲು ಪರಿಶ್ರಮ ಪಟ್ಟಿದ್ದಂತೂ ಸುಳ್ಳಲ್ಲ. ಈಗ ಸಂಸ್ಥೆಯು ಮಾಡಿರುವ ಕೆಲಸಗಳೇ ಸಂಸ್ಥೆಯನ್ನು ಗುರುತಿಸುತ್ತಿವೆ,




ಇದಕ್ಕೆ ಅಧಿಕಾರಿ ವರ್ಗ, ಸ್ಥಳೀಯ ರೈತರುಗಳು, ಪಂಚಾಯತ್ ಸದಸ್ಯರುಗಳು, ಊರಿನ ಮುಖಂಡರು ಮತ್ತು ಜನಸಮುದಾಯಗಳ ಅಪಾರ ಬೆಂಬಲವೇ ಕಾರಣ" ಎಂದರು.

ಸಮಾವೇಶ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಮನುವಿಕಾಸ ಸಂಸ್ಥೆಯ ನಿರ್ದೇಶಕ ಮಂಡಳಿಯ ಸದಸ್ಯರಾದ ಶ್ರೀ ಪ್ರಭಾಕರ್ ಭಟ್‌ರವರು "ಸಂಸ್ಥೆಯ ಬಗ್ಗೆ ಅನೇಕ ಗಣ್ಯರು, ರೈತ ಮುಖಂಡರು, ಹಾಗೂ ಜನಪ್ರತಿನಿಧಿಗಳು ನಮ್ಮ ಕೆಲಸವನ್ನು ಮೆಚ್ಚಿ ಮಾತನಾಡಿ ಕೆಲಸಕ್ಕೆ ಹೆಚ್ಚಿನ ಸ್ಫೂರ್ತಿ ನೀಡಿದ್ದಾರೆ. ಈ ರೀತಿಯ ಸಹಾಯ ಸಹಕಾರ ಎಲ್ಲ ಕ್ಷೇತ್ರದ ಗಣ್ಯರಿಂದ ಲಭ್ಯವಾದಾಗ ಮಾತ್ರ ಸಂಸ್ಥೆಯ ಕಾರ್ಯವು ಎಲ್ಲ ಸ್ತರದ ಜನಸಮುದಾಯವನ್ನು ತಲುಪುತ್ತದೆ. ಕೇವಲ ಉತ್ತರ ಕನ್ನಡ ಜಿಲ್ಲೆಯಲ್ಲಿ ಅಷ್ಟೇ ಅಲ್ಲದೆ ಶಿವಮೊಗ್ಗ, ಹಾವೇರಿ ಜಿಲ್ಲೆಗಳಿಂದಲೂ ರೈತರು ಹಾಗೂ ಮುಖಂಡರುಗಳು ಆಗಮಿಸಿದ್ದು, ಜಲ ಸಂರಕ್ಷಣೆ ಕ್ಷೇತ್ರದಲ್ಲಿ ಸಂಸ್ಥೆಯ ಕಾರ್ಯವೈಖರಿಯು ಯಾವರೀತಿಯಲ್ಲಿ ರೈತಾಪಿ ವರ್ಗಕ್ಕೆ ತಲುಪಿದೆ ಎನ್ನುವದರ ಕೈಗನ್ನಡಿಯಾದಂತಿದೆ ಎಂದರು,

ಶಿರಸಿ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಎಫ್.ಜಿ.ಚಿನ್ನಣ್ಣನವರ್ ಮಾತನಾಡಿ "ಮನುವಿಕಾಸ ಸಂಸ್ಥೆಯು ಈಗಾಗಲೇ ಹಲವಾರು ಅಭಿವೃದ್ಧಿಪರ ಕಾರ್ಯನೀತಿಗಳನ್ನು ರೂಪಿಸಿ ಎಲ್ಲ ಜನಸಮುದಾಯದವರನ್ನು ತಲುಪಿ ತಾಲೂಕಿನಾದ್ಯಂತ ಮನ್ನಣೆ ಪಡೆದಿದೆ. ಸರಕಾರದ ಜೊತೆಗೂಡಿ ಸ್ವಯಂ ಸೇವಾ ಸಂಸ್ಥೆಗಳು ಕಾರ್ಯನಿರ್ವಹಿಸಿದಾಗ ಮಾತ್ರ ಸಮಾಜದ ಮತ್ತು ಸಮುದಾಯಗಳ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ" ಎಂದರು, ಅಲ್ಲದೇ ಈ ಸಂಸ್ಥೆಯು ಕೋವಿಡ್



ಮೊದಲ ಮತ್ತು ಎರಡನೆಯ ಅಲೆಯ ಸಮಯದಲ್ಲಿ ನೆರೆ ಸಂದರ್ಭದಲ್ಲಿ ಅನೇಕ ಬಡ ಜನರಿಗೆ ಆಹಾರದ ಕಿಟ್‌ಗಳನ್ನು ವಿತರಿಸಿ ನೆರವಾಗಿದೆ ಆಸ್ಪತ್ರೆಗಳಿಗೆ ವೈದ್ಯಕೀಯ ಸಲಕರಣೆಗಳು ಹಾಗೂ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರಿಗೆ ಅಗತ್ಯವಿರುವ ವೈದ್ಯಕೀಯ ಕಿಟ್‌ಗಳನ್ನು ವಿತರಿಸಿ ಮನ್ನಣೆ ಪಡೆದಿದೆ" ಎಂದರು.

ಶಿರಸಿಯ ಅರಣ್ಯ ಮಹಾ ವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ವಾಸುದೇವ ಆರ್. ಮಾತನಾಡಿ "ಮನುವಿಕಾಸ ಸಂಸ್ಥೆಯು ಕೆರೆಗಳ ಪುನರುಜ್ಜೀವನದ ಜೊತೆಗೆ ಜೀವ ವೈವಿಧ್ಯತೆಯನ್ನು ರಕ್ಷಿಸಿ ಪೋಷಿಸುತ್ತಿದೆ. ಇದು ಮುಂದಿನ ಪೀಳಿಗೆಗೆ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸುವ ಜೊತೆಗೆ ಸಮರ್ಪಕ ಉಪಯೋಗಕ್ಕೂ ಕಾರಣವಾಗುತ್ತದೆ, ಅಲ್ಲದೇ ಅವರು ಹೂಳೆತ್ತಿದಂತಹ ಸುಮಾರು 25ಕ್ಕೂ ಹೆಚ್ಚು ಕೆರೆಗಳಿಗೆ ಖುದ್ದಾಗಿ ಭೇಟಿ ನೀಡಿ ಅಲ್ಲಿನ ರೈತರೊಂದಿಗೆ ಮಾತನಾಡಿದಾಗ, ಪುನರುಜ್ಜೀವನಗೊಂಡ ಕೆರೆಗಳಿಂದ ಕೃಷಿಗೆ ಆದ ಲಾಭವನ್ನು ಮೆಚ್ಚಿ ತುಂಬಾ ಸಂತಸದಿಂದ ಹಂಚಿಕೊಂಡಿದ್ದಾರೆ. ಅಲ್ಲದೆ ಇನ್ನುಳಿದ ಕೆರೆಗಳನ್ನು ಸಹ ಸಂಸ್ಥೆಯು ಹೂಳೆತ್ತಿಕೊಡಬೇಕು ಎಂದು ಬೇಡಿಕೆ ಸಲ್ಲಿಸಿದ್ದಾರೆ. ವೈಜ್ಞಾನಿಕವಾಗಿ ನೋಡಿದಾಗಲೂ ಕೆರೆ ಪುನರುಜ್ಜೀವನದಿಂದ ಅನೇಕ ಜೀವ ಸಂಕುಲಗಳ ಸಂತತಿ ವೃದ್ಧಿಯಾಗುತ್ತದೆ ಗ್ರಾಮದ ಕೊಳವೆ ಬಾವಿಗಳು ಹಾಗೂ ತೆರೆದ ಬಾವಿಗಳು ಬೇಸಿಗೆಯಲ್ಲೂ ನೀರಿನ ಅಭಾವವನ್ನು ನೀಗಿಸುತ್ತವೆ" ಎಂದರು.

ಸಮಾವೇಶದಲ್ಲಿ ಎಪಿಎಂಸಿ ಸದಸ್ಯರಾದ ಪ್ರಶಾಂತ ಗೌಡರ್ ಸಂತೊಳ್ಳಿ, ಗುಡ್ಡಾಪುರದ ರಾಘು ಎಂ ನಾಯ್ಕ, ಹಾನಗಲ್ ತಾಲೂಕಾ ರೈತ ಸಂಘದ ಅಧ್ಯಕ್ಷರಾದ ಮರಿಗೌಡ ಪಾಟೀಲ್, ಸಂಕನಗೌಡ ದೇವಿಕೊಪ್ಪ, ಹಿರೆಕೌಂಶಿ, ಮೊದಲಾದವರು ತಮ್ಮ ಅನುಭವವನ್ನು ಹಂಚಿಕೊಂಡರು.

ಸಮಾವೇಶದಲ್ಲಿ ಶಿರಸಿ, ಹಾನಗಲ್ ಮತ್ತು ಸೊರಬ ತಾಲೂಕಿನ 300ಕ್ಕೂ ಹೆಚ್ಚು ರೈತ ಬಾಂಧವರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯಚಟುವಟಿಕೆಯಲ್ಲಿ ಬೆನ್ನೆಲುಬಾಗಿ ನಿಂತಂತಹ–ಆಯ್ದ ರೈತ ಮುಖಂಡರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಸಮಾವೇಶದಲ್ಲಿ ಕದಂಬ ಕಲಾ ವೇದಿಕೆಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಸಮಾವೇಶದಲ್ಲಿ ಶಿರಸಿ ಪೊಲೀಸ್ ಅಧೀಕ್ಷಕರಾದ ರವಿ ಡಿ ನಾಯ್ಕ್, ಮಹೇಶ ವಿರೂಪಣ್ಣನವರ್, ಅಡಿಯಪ್ಪ ಆಲದಕಟ್ಟಿ, ಮಾರುತಿ ಕುಪ್ಪಗಡ್ಡೆ, ಚೌಡಪ್ಪ ಕಮರೂರು, ಶಿವಶಂಕರ ಗೌಡ, ನಟರಾಜ್ ಬಿ ಹೊಸೂರು, ಜಯಶೀಲ ಗೌಡ, ಪಾಂಡುರಂಗ ಪೈ, ಎಸ್ ಎಂ ಕಮನಳ್ಳಿ, ನಾಗಣ್ಣ ಯಾಲಕ್ಕಿ, ಕುಮಾರ ಸಾಕಣ್ಣನವರ್, ಭದ್ರಗೌಡ ಸೇರಿದಂತೆ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು. ಮನುವಿಕಾಸ ಸಂಸ್ಥೆಯ ತಾಲೂಕಾ ಸಂಯೋಜಕರಾದ ಶ್ರೀ ಅಶ್ವಥ್ ನಾಯ್ಕ್ ನಿರೂಪಿಸಿದರು.








... 1ನೇ ಪುಟದಿಂದ

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ "ಮನುವಿಕಾಸ ಸ್ವಯಂಸೇವಾ ಸಂಸ್ಥೆಯು ಕಳೆದ 18 ವರ್ಷಗಳಿಂದ ನೆಲ–ಜಲ ಸಂರಕ್ಷಣೆ, ಪರಿಸರ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ಹಲವಾರು ಕಾರ್ಯಚಟುವಟಿಕೆಗಳನ್ನು ರೂಪಿಸಿದ್ದು, ಈಗಾಗಲೇ ಉತ್ತರ ಕನ್ನಡ, ಹಾವೇರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನಗೊಳಿಸಿ ರೈತ ಸಮುದಾಯದ ನೀರಿನ ದಾಹವನ್ನು ನೀಗಿಸಿದೆ. 2000 ಕ್ಕೂ ಹೆಚ್ಚು ಸಣ್ಣ ಕೃಷಿ ಹೊಂಡಗಳ ನಿರ್ಮಾಣದಿಂದ ನೀರಿನ ನಿಶ್ಚಿಂತೆಗೆ ಕಾರಣವಾಗಿದೆ. ಮಹಿಳಾ ಸಬಲೀಕರಣವನ್ನೇ ಮುಖ್ಯ ಗುರಿಯಾಗಿಸಿಕೊಂಡು ಕೆಲಸಮಾಡುತ್ತಿರುವ ನಮ್ಮ ಸಂಸ್ಥೆ, ಮಹಿಳೆಯರು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ಬೇಕಾದ ಕೌಶಲ್ಯ ಆಧಾರಿತ ತರಬೇತಿಗಳನ್ನು ಆಯೋಜಿಸಿ ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಇದರ ಪ್ರಯೋಜನ ಪಡೆದು ಮಹಿಳೆಯರು ಸ್ವಾವಲಂಬಿ ಬದುಕನ್ನು ಕಟ್ಟಿಕೊಂಡಾಗ ಮಾತ್ರ ಸಂಸ್ಥೆಯ ಉದ್ದೇಶ ಈಡೇರಿದಂತೆ. ಸುಸ್ಥಿರ ಕೃಷಿಯ ಪರಿಕಲ್ಪನೆಯನ್ನು ಮೊದಲು ನಾವು ನಮ್ಮ ತಲೆಯಲ್ಲಿ ತುಂಬಿಕೊಂಡಾಗ ಮಾತ್ರ ನಮ್ಮ ನೆಲದಲ್ಲಿ ಕೃಷಿಯನ್ನು ಸುಸ್ಥಿರಗೊಳಿಸಲು ಸಾಧ್ಯ. ಮಹಿಳೆಯರು ಇಂದು ಹತ್ತು ಹಲವಾರು ಕ್ಷೇತ್ರಗಳಲ್ಲಿ ಮುಂದಿರುವಂತೆ ಕೃಷಿಯಲ್ಲಿಯೂ ಸಹ ಮುಂದಿದ್ದಾರೆ ಅದನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸವಾಗಬೇಕಿದೆ. ಇದರಿಂದ ರೈತ ಸಮುದಾಯದ ಅಭಿವೃದ್ಧಿಯ ಜೊತೆಗೆ ದೇಶದ ಅಭಿವೃದ್ಧಿಯೂ ಸಾಧ್ಯವಾಗುತ್ತದೆ" ಎಂದರು.

ಊರಿನ ಹಿರಿಯರಾದ ಬಸವಣ್ಣಪ್ಪ ಎಂ. ಟವಳಿ ಮಾತನಾಡಿ" ಇಂದಿನ ಸುಸಕ್ಷಿತ ಸಮಾಜದಲ್ಲಿ ಕೃಷಿಯ ಸುಸ್ಥಿರತೆಯ ಪರಿಕಲ್ಪನೆ ಮಾಯವಾಗುತ್ತಿದೆ. ಮಹಿಳೆ ಮತ್ತು ಪುರುಷ ಕೃಷಿವಲಯದಲ್ಲಿ ಸಮಾನವಾಗಿ ದುಡಿದಾಗ ಮಾತ್ರ ಕೃಷಿವಲಯದ ಅಭಿವೃದ್ಧಿ ಸಾಧ್ಯ. ಪಾರಂಪರಿಕ ಕೃಷಿ ಪದ್ಧತಿಗಳು ಮಾನವನ ಏಳಿಗೆಗೆ ಅನಾದಿ ಕಾಲದಿಂದಲೂ ಪೂರಕವಾಗಿವೆ. ಆದರೆ ಇಂದಿನ ಯುವ ಜನಾಂಗ ಬೇರೆ ಬೇರೆ ರೀತಿಯ ಆಧುನಿಕ ತಂತ್ರಜ್ಞಾನದ ಸರಿಯಾದ ಮಾಹಿತಿ ಇಲ್ಲದೆ ತಮ್ಮ ಜಮೀನಿನ ಬೆಳೆಗಳ ಜೊತೆಗೆ ಮಣ್ಣಿನ ಫಲವತ್ತತೆಯನ್ನೂ ಸಹ ನಾಶ ಮಾಡಿಕೊಳ್ಳುತ್ತಿದ್ದಾರೆ. ಇದು ಸುಸ್ಥಿರ ಕೃಷಿ ಅಭಿವೃದ್ಧಿಗೆ ಮಾರಕ, ಆದುದರಿಂದ ಸರಿಯಾದ ಮಾಹಿತಿ ಪಡೆದು ಕೃಷಿಯನ್ನು ನಡೆಸಿದರೆ ಮಾತ್ರ ಸಮಗ್ರ ಕೃಷಿ ಅಭಿವೃದ್ಧಿ ಸಾಧ್ಯ" ಎಂದರು





ಯುವ ಕೃಷಿ ಪ್ರಶಸ್ತಿಗೆ ಪಾತ್ರರಾದ ರೈತರಾದ ಶ್ರೀ ಬಸವರಾಜ ನಡುವಿನಮನಿ ಮಾತನಾಡಿ "ಸಾವಯವ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳುವದರ ಮೂಲಕ ಸುಸ್ಥಿರ ಕೃಷಿಯನ್ನು ಅನುಸರಿಸಲು ಹಲವಾರು ಮಾರ್ಗಗಳಿವೆ  ಅತೀ ಕಡಿಮೆ ನೀರಿನಲ್ಲಿ ಹೆಚ್ಚು ಬೆಳೆಗಳನ್ನು ಪಡೆಯುವ ಹಲವಾರು ಮಾರ್ಗಗಳಿವೆ. ಆದರೆ ಇಂದಿನ ರೈತ ಸಮುದಾಯ ಹಲವಾರು ಆಮಿಶ ಮತ್ತು ಆಕರ್ಷಣೆಗೆ ಒಳಗಾಗಿ ತಮ್ಮ ಜಮೀನಿನ ಫಲವತ್ತತೆಯ ಸಾರವನ್ನು ಕಳೆದುಕೊಳ್ಳುವಂತೆ ಮಾಡುತ್ತಿದೆ ಇದು ಮುಂದೊಂದು ದಿನ ಕೃಷಿಯ ವಿನಾಶಕ್ಕೆ ಕಾರಣವಾಗಲೂಬಹುದು. ಆದುದರಿಂದ ಸರಿಯಾದ ಸಮಯದಲ್ಲಿ ಮಾಹಿತಿ ಪಡೆದು ಕೃಷಿಯಲ್ಲಿನ ಸುಧಾರಿತ ಕ್ರಮಗಳನ್ನು ಅನುಸರಿಸಿದರೆ ಮಾತ್ರ ಕೃಷಿಯಲ್ಲಿನ ಸುಸ್ಥಿರತೆಯ ಪರಿಕಲ್ಪನೆ ಸಫಲವಾದಂತೆ" ಎಂದರು

ತರಬೇತಿಯಲ್ಲಿ ಸುಮಾರು 60ಕ್ಕೂ ಹೆಚ್ಚು ರೈತ ಮಹಿಳೆಯರು ಸುಸ್ಥಿರ ಕೃಷಿ ಪದ್ದತಿಯ ಪರಿಕಲ್ಪನೆ ಮತ್ತು ಅದರ ಲಾಭಗಳ ಕುರಿತಾಗಿ ಮಾಹಿತಿಯ ವಿನಿಮಯದ ಜೊತೆಗೆ ಎದುರಾಗುವ ಸಮಸ್ಯೆ ಮತ್ತು ಅದಕ್ಕೆ ಪರಿಹಾರಗಳನ್ನು ಕಂಡುಕೊಂಡರು

ಕಾರ್ಯಕ್ರಮದಲ್ಲಿ ಕಲಘಟಗಿ ತಾಲೂಕಾ ಪಂಚಾಯತಿಯ ಸದಸ್ಯರಾದ ಶ್ರೀ ಬಸಪ್ಪ ಎನ್ ಸಾದರ್,  ಬಮ್ಮಿಗಟ್ಟಿ ಗ್ರಾಮ ಪಂಚಾಯತ್‌ನ ಸದಸ್ಯರಾದ ಮಂಜುನಾಥ ಎನ್ ಧೂಳಿಕೊಪ್ಪ, ಊರಿನ ಪ್ರಮುಖರಾದ ನಿಂಗಪ್ಪ ಬೆನಕನಕಟ್ಟಿ ಮತ್ತು ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಬಸವರಾಜ ರಡ್ಡೇರ್, ಶ್ರೀಕಾಂತ್ ಹೆಗಡೆ,  ಗಣಪತಿ ಹೆಗಡೆ,  ಗಣಪತಿ ಯಲಿವಾಳ ಉಪಸ್ಥಿತರಿದ್ದರು.

# ಪ್ರತಿಕೂಲ ಸನ್ನಿವೇಶದಲ್ಲಿ ಮನುವಿಕಾಸದಿಂದ ನೆರೆ ಸಂತ್ರಸ್ಥರಿಗೆ ಅಗತ್ಯ ಪರಿಕರಗಳ ವಿತರಣೆ ಕಾರ್ಯ ಶ್ಲಾಘನೀಯ : ವಿಶ್ವೇಶ್ವರ ಹೆಗಡೆ ಕಾಗೇರಿ





ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ನೆರೆ ಹಾವಳಿಯಿಂದ ತೀವ್ರ ತೊಂದರೆಗೀಡಾದ ಬಾಳೂರು ಗ್ರಾಮದ ಸಂತ್ರಸ್ಥರಿಗೆ ಅಗತ್ಯ ಪರಿಕರಗಳ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಸಂತ್ರಸ್ತರಿಗೆ ಅಗತ್ಯ ದಿನಸಿ ಕಿಟ್, ಶಾಲಾಮಕ್ಕಳಿಗೆ ಅಗತ್ಯ ಕಲಿಕೋಪರಣಗಳು ಮತ್ತು ತೀವ್ರ ಪ್ರಮಾಣದ ಹಾನಿಯಿಂದಾಗಿ ಮನೆಗಳನ್ನು ಕಳೆದುಕೊಂಡು ತೊಂದರೆಗೀಡಾಗಿದ್ದ ಕುಟುಂಬಗಳಿಗೆ ಗ್ಯಾಸ್ ಸ್ಟೋವ್ ಮತ್ತು ಸಿಲಿಂಡರ್ ಗಳನ್ನು ವಿತರಿಸಿ, ಕುಟುಂಬಗಳಿಗೆ ಸಾಂತ್ವನ ನೀಡಿ ಮಾತನಾಡಿದ ಸನ್ಮಾನ್ಯ ವಿಧಾನಸಭೆ ಅಧ್ಯಕ್ಷರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ' ಪ್ರಕೃತಿ ವಿಕೋಪಗಳು ಬಂದಾಗ ಮನುಕುಲಕ್ಕೆ ಅಪಾರ ಪ್ರಮಾಣದ ಆರ್ಥಿಕ ನಷ್ಟವಾದರೂ ಅಂತಹ ಸನ್ನಿವೇಶಗಳನ್ನು ಧೈರ್ಯವಾಗಿ ಎದುರಿಸಿದರೆ ಮಾತ್ರ ಮುನ್ನಡೆದು ಬದುಕು ಕಟ್ಟಿಕೊಳ್ಳಲು ಸಾಧ್ಯ. ಮನುವಿಕಾಸ ಸಂಸ್ಥೆಯು ಇಂತಹ ಸಮಯದಲ್ಲಿ ಅಗತ್ಯ ಪರಿಕರಗಳನ್ನು ವಿತರಿಸಿ ಮಾನವೀಯತೆ ಮೆರೆಯುತ್ತಿದೆ. ಈ ಕಾರ್ಯ ನಿಜಕ್ಕೂ ಶ್ಲಾಘನೀಯ' ಎಂದರು.

ಕಾರ್ಯಕ್ರಮದಲ್ಲಿ ಸಿದ್ದಾಪುರ ತಾಲೂಕಿನ ತಹಶೀಲ್ದಾರರು ಹಾಗೂ ಜಿಲ್ಲಾ ಪಂಚಾಯತಿ ಸದಸ್ಯರಾದ ಶ್ರೀ. ಎಂ. ಜಿ. ಹೆಗಡೆ ಗೆಜ್ಜೆ, ತಾಲೂಕಾ ಪಂಚಾಯತಿಯ ಸದಸ್ಯರಾದ ಶ್ರೀ ರಘುಪತಿ ಹೆಗಡೆ ಹಾಲೆಗೌರಿ, ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗೂ ಸದಸ್ಯರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಮನುವಿಕಾಸ ಸಂಸ್ಥೆಯ  ಸಂಸ್ಥಾಪಕರಾದ ಶ್ರೀ ಹರಿಶ್ಚಂದ್ರ ಭಟ್ಟ, ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಹಾಗೂ ಸಿಬ್ಬಂದಿಗಳು ಮತ್ತು ಬಾಳೂರು ಕರ್ಜಗಿ ಗ್ರಾಮದ ಗ್ರಾಮಸ್ಥರು ಉಪಸ್ಥಿತರಿದ್ದರು.




# ಮನುವಿಕಾಸದಿಂದ ಧಾರವಾಡದ ಕಲಘಟಗಿಯಲ್ಲಿ ಕೆರೆ ಸಮಾವೇಶ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಅಜೀಂ ಪ್ರೇಮ್ ಜಿ ಫೌಂಡೇಶನ್ ಸಹಯೋಗದೊಂದಿಗೆ ದಿನಾಂಕ 30-10-2021 ರಂದು ಕಲಘಟಗಿಯ ಹನ್ನೆರಡು ಸಾವಿರ ಮಠದ ಸಭಾ ಭವನದಲ್ಲಿ ಕೆರೆ ಸಮಾವೇಶ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸಮಾವೇಶ ದೀಪ ಬೆಳಗಿಸುವದರ ಮೂಲಕ ಉದ್ಘಾಟಿಸಿ ಮಾತನಾಡಿದ ಕಲಘಟಗಿ ಕ್ಷೇತ್ರದ ಶಾಸಕರಾದ ಶ್ರೀ. ಸಿ ಎಮ್. ನಿಂಬಣ್ಣವರ್ ಮಾತನಾಡಿ " ಸರ್ಕಾರದ ನೀರಾವರಿ ಇಲಾಖೆ, ಪಂಚಾಯತ್ ರಾಜ್ ಇಲಾಖೆಯಿಂದ ಜಾರಿಯಾಗುವ ನೂರಾರು ಕೋಟಿ ರೂಪಾಯಿ ವೆಚ್ಚದ ಹಲವಾರು ಯೋಜನೆಗಳು ಕಡತದಲ್ಲಿ ಅಭಿವೃದ್ಧಿಯಾಗುತ್ತಿವೆ ಹೊರತು ಅನುದಾನ ಸದ್ಬಳಕೆ ಆಗುತ್ತಿಲ್ಲ ನಾನು ಶಾಸಕನಾದ ನಂತರ ಬೇಡ್ತಿ ಹಳ್ಳದ ನೀರು ಹರಿದು ಸಮುದ್ರ ಸೇರುವ ಬದಲು ರೈತರಿಗೆ ಅನೂಕುಲವಾಗಲೆಂದು ತಾಲೂಕಿನ ಬೆಲವಂತರ ಗ್ರಾಮದ ಬಳಿ ಬಾಂದಾರ್ ನೀರ್ಮಾಣ ಮಾಡಿ, ಸುಮಾರು 36 ಕೆರೆಗಳಿಗೆ ನೀರು ತುಂಬಿಸುವ ಯೋಜನೆ ರೂಪಿಸಲಾಗಿದೆ.

ಯೋಜನೆ ಅನುಷ್ಠಾನ ವಿಳಂಬಕ್ಕೆ ಸರ್ಕಾರವೊಂದೇ ಕಾರಣವಲ್ಲ. ಸಮುದಾಯದ ಸಹಭಾಗಿತ್ವ ಕೊರತೆಯು ಕಾರಣ. ಕೆರೆ-ಕಟ್ಟೆಗಳ ಅತಿಕ್ರಮಣ ಮಾಡುವವರಿಗೆ ಸಾಥ್ ನೀಡುವ ಅಧಿಕಾರಿಗಳು ಹೆಚ್ಚುತ್ತಿದ್ದಾರೆ. ಇಂತಹ ಪರಿಸ್ಥಿತಿ ನಿರ್ಮಾಣವಾದರೆ, ಕೆರೆಗಳ ಅಭಿವೃದ್ಧಿ, ಸಂರಕ್ಷಣೆ ಆಗುವುದಾದರೂ ಹೇಗೆ ಎಂದರು. ಕೆರೆ ಸಮಾವೇಶಗಳಿಂದ ಕೆರೆಗಳ ಅಭಿವೃದ್ಧಿ ಜೊತೆಗೆ ಜನರಲ್ಲಿ ಜಾಗೃತಿ ಮೂಡುತ್ತದೆ.ಇಂತಹ ಕೆಲಸ ಮಾಡುವ ಮನುವಿಕಾಸ ಸಂಸ್ಥೆಗೆ ಕ್ಷೇತ್ರದ ಜನರೊಂದಿಗೆ ಸಹಕಾರ ನೀಡುತ್ತೇನೆ ಎಂದರು.

ವಾಲ್ಮೀ ಸಂಸ್ಥೆಯ ನಿರ್ದೇಶಕರಾದ ಶ್ರೀ ರಾಜೇಂದ್ರ ಪೊದ್ದಾರ್ ಮಾತನಾಡಿ "ಸ್ಥಳೀಯ ಜನರ ಸಹಭಾಗಿತ್ವದಲ್ಲಿ ಕೆರೆಗಳ ಪುನಶ್ಚೇತನ ಮಾಡಬಹುದು ಎಂದು ಸರ್ಕಾರ ಹೇಳುವುದೊಂದೆ ಆಗಿದೆ. ಆದರೆ ಸರಿಯಾಗಿ ಅನುಷ್ಠಾನ ಮಾಡುವವರಿಲ್ಲ. ನೆಲ, ಜಲ ಸಂರಕ್ಷಣೆ ಮಾಡಲು ಪ್ರತಿಯೊಬ್ಬರು ಸ್ವಯಂ ಪ್ರೇರಣೆಯಿಂದ ಮುಂದಾಗಬೇಕಿದೆ ಎಂದು ಮನವಿ ಮಾಡಿದರು.

ತಹಶೀಲ್ದಾರರಾದ ಶ್ರೀ ಯಲ್ಲಪ್ಪಾ ಗೋಣೆಣ್ಣವರ ಮಾತನಾಡಿ ನೀರನ್ನು ಉಳಿಸುವ ಕಾರ್ಯ ಮಾಡಬೇಕಿದೆ. ಪ್ರಕೃತಿ ಹಾಗೂ ಪ್ರಕೃತಿ ನಿಯಮವನ್ನು ನಾವು ಹಿಂದಿಕ್ಕಿ ಆಧುನಿಕ ಜೀವನದಲ್ಲಿ ಮುಂದೆ ಸಾಗುತ್ತಿದ್ದೇವೆ. ಪ್ರಕೃತಿಯ ದಬ್ಬಾಳಿಕೆ ಮಾಡಿ ಮೇಲೆ ಅದರ ಪರಿಣಾಮವನ್ನು ಪ್ರಸ್ತುತದಲ್ಲಿ ಅನುಭವಿಸುತ್ತಿದ್ದೇವೆ.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕ ಮಾತನಾಡಿ ಮನುವಿಕಾಸ ಸಂಸ್ಥೆಯ ವಿವಿಧ ಕಾರ್ಯಚಟುವಟಿಕೆಗಳ ಬಗ್ಗೆ ವಿವರಿಸಿದರು.

ವಾಲ್ಮಿ ಸಂಸ್ಥೆಯ ಸುರೇಶ ಕುಲಕರ್ಣಿ, ವಾಲ್ಮಿ ಕಾರ್ಯನಿರ್ವಾಹಕ ಇಂಜಿನಿಯರ್ ಗಿರೀಶ್, ರೈತರಾದ ನಿಜಗುಣಿ ಕಲಗೇರಿ, ಉಳುವಪ್ಪ ಬಳಿಗೇರ, ಮಲ್ಲಯ್ಯ ತೊಟಗಂಟಿ, ವಿ. ಪಿ. ಪಟ್ಟಣಶೆಟ್ಟಿ, ಶಶಿಧರ್ ಹುಲಿಕಟ್ಟಿ, ಕೆ. ಬಿ. ಪಾಟೀಲ್, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಎಂ.ಜಿ.ಹೆಗಡೆ, ಬಸವರಾಜ್ ರಡ್ಡೆರ್, ಗಣಪತಿ ಯಲಿವಾಳ, ಮಂಜುನಾಥ್ ತೋರ್ಲೆಕರ್, ನಿರಂಜನ್ ಕದಂ, ಸಂಜಯ ಲಮಾಣಿ, ಗಣಪತಿ ಹೆಗಡೆ, ಶ್ರೀಕಾಂತ್ ಹೆಗಡೆ, ಕಿರಣ್ ಗೌಡ ಉಪಸ್ಥಿತರಿದ್ದರು.



# ಮನುವಿಕಾಸ ಸಂಸ್ಥೆಯಿಂದ ಹೈನುಗಾರಿಕೆ ತರಬೇತಿ




ಮನುವಿಕಾಸ ಸಂಸ್ಥೆ, ಈಡೆಲ್‌ಗೀವ್ ಫೌಂಡೇಶನ್ ಹಾಗೂ ದಲ್ಯಾನ್ ಫೌಂಡೇಶನ್ ಸಹಯೋಗದೊಂದಿಗೆ ದಿನಾಂಕ 28–10–2021 ರಂದು ಶಿರಸಿಯ ಬಿಕ್ಕಳ್ಳಿ ಸಭಾಭವನದಲ್ಲಿ ಹೈನುಗಾರಿಕಾ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಿರಸಿಯ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳಾದ ಡಾ.ರಂಗನಾಥ ಇತ್ತೀಚಿನ ದಿನಗಳಲ್ಲಿ ಹೈನುಗಾರಿಕೆ ಉದ್ಯಮವು ಕೂಡ ಅತ್ಯಂತ ಲಾಭದಾಯಕ ಕ್ಷೇತ್ರವಾಗಿದ್ದು, ಸಮಗ್ರ ಜಾನುವಾರು ನಿರ್ವಹಣೆಯಿಂದ ಮಾತ್ರ ತ್ವರಿತ ಗತಿಯಲ್ಲಿ ಲಾಭಗಳಿಸಲು ಸಾಧ್ಯ. ಜಾನುವಾರುಗಳ ಪಾಲನೆ ಮತ್ತು ಪೋಷಣೆಯನ್ನು ಅತ್ಯಂತ ಮುತುವರ್ಜಿಯಿಂದ ಮಾಡಿದಾಗ ಮಾತ್ರ ಪರಿಣಾಮಕಾರಿ ಹೈನುಗಾರಿಕೆ ಸಾಧ್ಯ. ಸೂಕ್ತ ಸಮಯದಲ್ಲಿ ಜಾನುವಾರುಗಳ ರೋಗ ಲಕ್ಷಣ ಪತ್ತೆ ಹಚ್ಚಿ ಔಷಧೋಪಚಾರ ಮಾಡಿ ಅವುಗಳ ನಿರ್ವಹಣೆ ಮಾಡಬೇಕು ಮತ್ತು ಸೂಕ್ತ ಸಮಯಕ್ಕೆ ಸೂಕ್ತ ಲಸಿಕೆ ಹಾಕಿಸುವುದು ಕೂಡ ಮುಖ್ಯವಾಗುತ್ತದೆ ಎಂದರು.

ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಪಶು ವೈದ್ಯರಾದ ಶ್ರೀಯುತ ರಾಘವೇಂದ್ರ ಸ್ವಾದಿ ಅವರು ಮಾತನಾಡಿ ಹೈನುಗಾರಿಕೆಯಲ್ಲಿ ಪ್ರಮುಖವಾಗಿ ಯಾವತರಹದ ಮಿಶ್ರ ತಳಿಯ ಜಾನುವಾರುಗಳಿಂದ ಹಾಲಿನ ಉತ್ಪಾದನೆ ಜಾಸ್ತಿ ಬರುವುದಾಗಿ ತಿಳಿಸಿದರು ಒಣ ಮೇವು ಸಂತುಲಿತ ಪ್ರಮಾಣದಲ್ಲಿ ಕೊಟ್ಟಾಗ ಹಾಲಿನ ಉತ್ಪಾದನೆ ಜಾಸ್ತಿಯಾಗಿ ಸಂಘದ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಸಹಕಾರಿಯಾಗುತ್ತದೆ. ಜಾನುವಾರುಗಳ ಗರ್ಭಧಾರಣೆಯ ಸಮಯದಲ್ಲಿ ಮತ್ತು ನಂತರ ನಿರ್ವಹಿಸ ಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ವಿವರಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಕರ್ನಾಟಕ ಹಾಲು ಉತ್ಪಾದಕರ ಒಕ್ಕೂಟದ ಅಧಿಕಾರಿಗಳಾದ ಶ್ರೀಯುತ ಎಸ್ ಎಸ್ ಬಿಜ್ಜೂರ ಅವರು ಮಾತನಾಡಿ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಹಿಳೆಯರು ಕೂಡ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯ. ಡೈರಿ ಉದ್ಯಮ ಮಾಡಲು ಆಸಕ್ತಿ ಉಳ್ಳ ಮಹಿಳೆಯರಿಗೆ ಸರ್ಕಾರದಿಂದ ಹಲವಾರು ಪ್ರೋತ್ಸಾಹಕರ ಯೋಜನೆಗಳು ಲಭ್ಯವಿದೆ. ಇದನ್ನು ಇಂದಿನ ಮಹಿಳೆಯರು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಮನುವಿಕಾಸ ಸಂಸ್ಥೆಯ ಯೋಜನಾ ಉಪನಿರ್ದೇಶಕರಾದ ಶ್ರೀಯುತ ಮಂಜುನಾಥ ಹೆಗಡೆ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಸವಿವರವಾಗಿ ತಿಳಿಸಿದರು

ಕಾರ್ಯಕ್ರಮದಲ್ಲಿ 45ಕ್ಕೂ ಹೆಚ್ಚು ಮಹಿಳೆಯರು ಹೈನುಗಾರಿಕೆಯ ಬಗೆಗಿನ ತಮ್ಮ ಗೊಂದಲಗಳನ್ನು ಕೇಳಿ ಬಗೆ ಹರಿಸಿಕೊಂಡರು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ಜಯರಾಮ ನಾಯ್ಕ, ಸಂಸ್ಥೆಯ ಸಿಬ್ಬಂದಿಗಳಾದ ಮಣಿಕಂಠ ಚಲುವಾದಿ, ರಾಘವೇಂದ್ರ ಭಟ್ಟ, ಶಿಲ್ಪಾ ಶಾಸ್ತ್ರಿ ಉಪಸ್ಥಿತರಿದ್ದರು.






# ಕೋವಿಡ್‌ನಿಂದ ಮೃತರಾದ  ಸದಸ್ಯರ ಕುಟುಂಬಕ್ಕೆ ಮನುವಿಕಾಸ ಸಂಸ್ಥೆಯಿಂದ ಆರ್ಥಿಕ ನೆರವು




ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಗೀವ್ ಇಂಡಿಯಾ  ಮುಂಬೈ ಸಂಸ್ಥೆಯ ಸಹಯೋಗದೊಂದಿಗೆ 15/09/2021 ರಂದು ಕೋವಿಡ್–19ರ ಸಮಯದಲ್ಲಿ ನಿಧನರಾದ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಬಬ್ರುವಾಡದ  ಗೋವಿಂದ ಮಹಾಲೆ (59 ವರ್ಷ) ಎನ್ನುವವರ ಕುಟುಂಬಕ್ಕೆ ಇತರೇ ಯಾವುದೇ ಆದಾಯದ ಮೂಲವಿರಲಿಲ್ಲ.  ಅಗತ್ಯವಿರುವ ಎಲ್ಲ ದಾಖಲಾತಿಗಳನ್ನು ಒದಗಿಸಿದ್ದರೂ ಸರಕಾರದಿಂದ ಈವರೆಗೂ ಯಾವುದೇ ಸಹಾಯ ಕುಟುಂಬಕ್ಕೆ ದೊರಕಿರಲಿಲ್ಲ. ಆದುದರಿಂದ ಅವರ ಮಗನಾದ ಸಂಕೇತ್ ಮಹಾಲೆ ಅವರಿಗೆ  ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ 30.000 ರೂಪಾಯಿಗಳನ್ನು ನೀಡಲಾಯಿತು.

ಗೋವಿಂದ ಮಹಾಲೆ ಎನ್ನುವವರು ಕರ್ತವ್ಯದಲ್ಲಿದ್ದಾಗಲೇ ನಿಧನ ಹೊಂದಿದ್ದು,  ಅವರದ್ದು ಆರ್ಥಿಕವಾಗಿ ಬಡವರ್ಗದ ಕುಟುಂಬವಾಗಿದೆ. ಅವರು ಇಬ್ಬರು ಮಕ್ಕಳನ್ನು ಹೊಂದಿದ್ದು ಮಗ ಎಂ.ಸಿ.ಎ. ಓದುತ್ತಿದ್ದು, ಮಗಳ ಓದನ್ನು ನಿಲ್ಲಿಸಿ ಖಾಸಗಿ ಕಂಪನಿಯೊಂದರಲ್ಲಿ ಕಾರ್ಯನಿರ್ವಹಿಸಿ ಮನೆಗೆ ಆಧಾರವಾಗಿದ್ದಾಳೆ.

ಚೆಕ್ ವಿತರಣಾ ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ  ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ, ಸಿಬ್ಬಂದಿಗಳಾದ ಶ್ರೀ ಪವನ ಬೊಮ್ಮನಹಳ್ಳಿ, ಶ್ರೀ ಮಹೇಶ್ ನಾಯ್ಕ್, ಕುಮಾರಿ ಗೀತಾ ನಿಲೇಕಣಿ ಉಪಸ್ಥಿತರಿದ್ದರು



# ಮನುವಿಕಾಸ ಸಂಸ್ಥೆಯಿಂದ ಸಿದ್ದಾಪುರದಲ್ಲಿ ಆರ್ಥಿಕ ನೆರವು

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯಿಂದ ಗೀವ್ ಇಂಡಿಯಾ ಮುಂಬೈ ಸಂಸ್ಥೆಯ ಸಹಯೋಗದೊಂದಿಗೆ ಕೋವಿಡ್ ಸೋಂಕಿನಿಂದ ಪತಿಯನ್ನು ಕಳೆದುಕೊಂಡಿದ್ದ ಸಿದ್ದಾಪುರ ತಾಲೂಕಿನ ಕೊರ್ಲಕೈ ಜಿಡ್ಡಿಯ ನಿವಾಸಿ ವಿನೋದಾ ರಾಘವೇಂದ್ರ ಕೊಟ್ರಮ್ ಅವರ ಮನೆಗೆ ಆರ್ಥಿಕ ಸಹಾಯ ಮಾಡಲಾಗಿದೆ.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಅವರು  ಮನೆಗೆ ಭೇಟಿ ನೀಡಿ ಮೃತರ ಕುಟುಂಬಕ್ಕೆ ರೂ. 30,000 ಚೆಕ್‌ನ್ನು ವಿತರಿಸಿದರು. ಈ ಸಂದರ್ಭದಲ್ಲಿ  ಸಂಸ್ಥೆಯ ಸಿಬ್ಬಂದಿ ಪುನೀತ್ ನಾಯ್ಕ್‌ರವರು ಉಪಸ್ಥಿತರಿದ್ದರು.



# ಮನುವಿಕಾಸ ಸಂಸ್ಥೆಯಿಂದ ಬ್ಯೂಟಿಶಿಯನ್ ತರಬೇತಿ

ದಿನಾಂಕ 27–10–2021 ರಂದು ಹಳಿಯಾಳ ತಾಲೂಕಿನ ಸಂತೋಷ ಹೊಟೆಲ್ ಸಭಾಭವನದಲ್ಲಿ ಮನುವಿಕಾಸ ಸಂಸ್ಥೆ, ಈಡೆಲ್ ಗೀವ್ ಫೌಂಡೇಶನ್ ಮತ್ತು ದಲ್ಯಾನ್ ಫೌಂಡೇಶನ್ ಇವರ ಸಹಭಾಗಿತ್ವದಲ್ಲಿ ಬ್ಯೂಟಿಶಿಯನ್ ತರಬೇತಿಯನ್ನು ಉದ್ಘಾಟಿಸಲಾಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀಯುತ ವಿ.ಎಸ್. ಪಾಟೀಲ, ಹಿರಿಯ ಪತ್ರಕರ್ತರು ಹಾಗೂ ದಾಂಡೆಲಿ ಪ್ರೆಸ್ ಕ್ಲಬ್‌ನ ಅಧ್ಯಕ್ಷರು, ಸ್ವ ಉದ್ಯೋಗದ ಪರಿಕಲ್ಪನೆಯ ಬಗ್ಗೆ, ಮನುವಿಕಾಸ ಸಂಸ್ಥೆಯ ಕಾರ್ಯಚಟುವಟಿಕೆಯ ಬಗ್ಗೆ ಜನಪರ ಕಾರ್ಯಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮತ್ತೋರ್ವ ಅತಿಥಿಯಾಗಿ ಆಗಮಿಸಿದ ಸಹೇಲಿ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀಮತಿ ಮೀನಾಕ್ಷಿ ಕನ್ನಾಡಿ ಅವರು ಮಾತನಾಡಿ ಮಹಿಳೆಯರಿಗೆ ಸ್ವಾವಲಂಬನೆಯ ಬದುಕಿನಲ್ಲಿ ಬ್ಯೂಟಿಶಿಯನ್ ತರಬೇತಿ ಬಹಳ ಅತ್ಯುತ್ತಮವಾದಂತಹ ತರಬೇತಿ, ಇಂತಹ ತರಬೇತಿಯನ್ನು ಆಯೋಜಿಸಿದಂತಹ ಮನುವಿಕಾಸ ಸಂಸ್ಥೆಯ ಕಾರ್ಯ ವೈಖರಿಯನ್ನು ಶ್ಲಾಘಿಸಿದರು.ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ಸಿಬ್ಬಂದಿ ಗಣಪತಿ ಹೆಗಡೆ ಮತ್ತು ನಿರಂಜನ ಕದಂ ಉಪಸ್ಥಿತರಿದ್ದರು.





# ಮನುವಿಕಾಸದಿಂದ ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ತರಬೇತಿ

ಮನುವಿಕಾಸ ಮತ್ತು ಹನ್ಸ್ ಸೀಡಲ್ ಫೌಂಡೇಶನ್ ಇಂಡಿಯಾ ಅವರ ಸಹಯೋಗದೊಂದಿಗೆ 11–10–2021 ರಂದು ಶಿರಸಿಯ ಪಂಚವಟಿ ಹೊಟೇಲ್‌ನ ಸಭಾಂಗಣದಲ್ಲಿ ಒಂದು ದಿನದ ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಾಗಾರವನ್ನು ಉದ್ಘಾಟಿಸಿದ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಮನುವಿಕಾಸ ಸಂಸ್ಥೆಯ ನಿರ್ದೇಶಕ ಮಂಡಳಿಯ ಸದಸ್ಯರಾದ ಶ್ರೀ ಪ್ರಭಾಕರ್ ಭಟ್ಟ ಮಾತನಾಡಿ "ಇಂದು ನಗರೀಕರಣ, ಅರಣ್ಯ ನಾಶ, ಅತಿಯಾದ ನೀರಿನ ಅವಲಂಬನೆಯಿಂದ ಸಮರ್ಪಕ ನೀರಿನ ನಿರ್ವಹಣೆಯಲ್ಲಿ ಕೊರತೆ ಉಂಟಾಗಿದೆ. ಸಮಾಜದ ಪ್ರತಿ ಸ್ತರದ ಜನರಿಗೆ ಇದರಿಂದ ತೊಂದರೆಯಾಗಿದ್ದರೂ ಪರೋಕ್ಷವಾಗಿ ಇದಕ್ಕೆ ಮಾನವನೇ ಮೂಲಕಾರಣವೂ ಹೌದು. ಹಾಗಾಗಿ ಸಮಗ್ರ ಜಲ ಸಂಪನ್ಮೂಲಗಳ ನಿರ್ವಹಣೆ ಕುರಿತಾದ ಚರ್ಚೆಗಳು ಮತ್ತು ವಿಚಾರ ವಿನಿಮಯಗಳು ಜಾಗತಿಕವಾಗಿ ಆದಾಗ ಮಾತ್ರ ಇದಕ್ಕೊಂದು ಪರಿಹಾರವನ್ನು ಕಂಡುಕೊಳ್ಳಲು ಸಾಧ್ಯ, ಭಾರತದಂತಹ ಕೃಷಿ ಪ್ರಧಾನ ರಾಷ್ಟ್ರದಲ್ಲಿ ನಿರಂತರವಾದ ಪ್ರಯತ್ನದಿಂದಾಗಿ ಮಾತ್ರ ಪರಿಹಾರೋಪಾಯ ಗಳನ್ನು ಕಂಡುಕೊಳ್ಳಲು ಶಕ್ತವಾಗುತ್ತದೆ" ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಬೆಂಗಳೂರಿನ ಏಟ್ರೀ ಸಂಸ್ಥೆಯ ಸಹವರ್ತಿ ಅಧಿಕಾರಿಯಾದ ಡಾ. ಶ್ರೀನಿವಾಸ ಬಡಿಗೇರ್ ಮಾತನಾಡಿ "ಜಲ ಸಂಪನ್ಮೂಲಗಳ ಅಭಿವೃದ್ಧಿ ಜಾಗತಿಕವಾಗಿ ಯಾವರೀತಿ ಇದೆ, ಭಾರತದಲ್ಲಿ ಕಳೆದ 60 ವರ್ಷಗಳಲ್ಲಿ ನೀರಿನ ಕೊರತೆ ಅತಿಯಾದ ರೀತಿಯದ್ದಾಗಿದ್ದು ಬಳಕೆ ಮಾತ್ರ ದಿನ ದಿನಕ್ಕೂ ಏರಿಕೆಯಾಗಿದೆ. ವಿವಿಧ ಭಾಗೀದಾರರ ಹುಟ್ಟು ಇದಕ್ಕೆ ಪ್ರತಿಕೂಲ ಸನ್ನಿವೇಶವನ್ನು ಒಡ್ಡಿದೆ. ಭಾರತದಲ್ಲಿ 54% ಕ್ಕಿಂತ ಹೆಚ್ಚು ಜನರು ನೀರಿನ ಕೊರತೆಯನ್ನು ಎದುರಿಸುತ್ತಿದ್ದು, 80% ಮೇಲ್ಮೈ ನೀರು ಕಲುಷಿತವಾಗಿವೆ. ಅಂತರ್ಜಲದ ಅತಿಯಾದ ಅವಲಂಬನೆ ನೀರಿನ ಸಮಗ್ರ ನಿರ್ವಹಣೆಗೆ ಪ್ರತಿಕೂಲ ವಾತಾವರಣವನ್ನು ತಂದೊಡ್ಡಿದೆ. ಕಳೆದ ದಶಕದಲ್ಲಿ ಜೌಗು ಪ್ರದೇಶಗಳ ವಿಸ್ತೀರ್ಣದಲ್ಲಿ ಭಾರೀ ನಷ್ಟ ದಾಖಲಾಗಿದ್ದು, 1960 ರಿಂದ ಕರ್ನಾಟಕದಲ್ಲಿ ಆಂತರಿಕ ಮಳೆಯ ಪ್ರಮಣ ಕಡಿಮೆಯಾಗಿದೆ. 2017 ರಲ್ಲಿ ಕರ್ನಾಟಕದ 176 ತಾಲೂಕುಗಳಲ್ಲಿ 160 ತಾಲೂಕುಗಳು ಬರಪೀಡಿತ ಎಂದು ಘೋಷಣೆಯಾಗಿದೆ. ಒಟ್ಟೂ 27% ಭೂಮಿ ಮಾತ್ರ ಕೃಷಿಗೆ ಯೋಗ್ಯವಾಗಿದ್ದು, ರೈತ ಕುಟುಂಬಗಳು ಹೆಚ್ಚಾಗಿ ಮಳೆಯಾಶ್ರಿತ ಕೃಷಿಯತ್ತ ಅವಲಂಬಿತವಾಗಿದೆ. ರಾಜಸ್ಥಾನದ ನಂತರದಲ್ಲಿ ಕರ್ನಾಟಕವು 2ನೇ ಬರಪೀಡಿತವಾದ ರಾಜ್ಯವಾಗಿದ್ದು 2001 ರಿಂದ 2019ರ ನಡುವೆ ಕರ್ನಾಟಕವು 15 ವರ್ಷಗಳ ಕಾಲ ಬರಪೀಡಿತವಾಗಿದೆ. ನೀರಿನ ಸಮಗ್ರ ನಿರ್ವಹಣೆಯ ಸೂಚಿಗಳು, ನೀರಿನ ವಿಶೇಷ ಗುಣ ಲಕ್ಷಣಗಳು, ಸೇವಿಸುವ ಮತ್ತು ಸೇವಿಸದ ನೀರಿನ ಬಳಕೆಗಳು, ಭಾರತದ ರಾಷ್ಟ್ರೀಯ ಜಲನೀತಿಯ ಅಗತ್ಯತೆ, ಅನುಷ್ಠಾನ ಮತ್ತು ಪರಿಣಾಮಗಳ ಕುರಿತು ಅವರು ವಿವರಿಸಿದರು. ಸಮಗ್ರ ಕೃಷಿಯಲ್ಲಿ ನೀರಿನ ಸರಿಯಾದ ನಿರ್ವಹಣೆಯಿಂದ ಮಾತ್ರ ಮುಂದಿನ ಪೀಳಿಗೆಗೆ ಜಲಸಂಪನ್ಮೂಲವನ್ನು ಒದಗಿಸಲು ಸಾಧ್ಯ" ಎಂದರು.



ಶಿರಸಿಯ ಅರಣ್ಯ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ವಾಸುದೇವ ಆರ್. ಮಾತನಾಡಿ "ನಾವು ಈಗಿರುವ ಪರಿಸ್ಥಿತಿಗೆ ಈ ಹಿಂದಿನ 60 ವರ್ಷಗಳಲ್ಲಿ ನಾವು ಮಾಡಿದ ತಪ್ಪುಗಳೇ ಕಾರಣ. ಅತಿಯಾದ ಪೆಟ್ರೋಲಿಯಂ ಉತ್ಪನ್ನಗಳ ಬಳಕೆ ಮತ್ತು ಪ್ಲಾಸ್ಟಿಕ್ ಬಳಕೆಯಿಂದ ಇಂದು ಎಲ್ಲ ವಲಯಗಳಲ್ಲಿ ಏರು ಪೇರು ಉಂಟಾಗಿದೆ. ವಾತಾವರಣ ಹಾಳಾಗಿದೆ. ವಿಶೇಷವಾಗಿ ಮೈಕ್ರೊ ಪ್ಲಾಸ್ಟಿಕ್‌ಗಳ ಬಳಕೆಯಿಂದ ಇಂದು ನಾವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ನದಿಯ ಅಂಚಿನಲ್ಲಿನ ಪ್ಲಾಸ್ಟಿಕ್ ಹಾವಳಿ ನೀರಿನ ಕಲುಷಿತತೆಗೂ ಕಾರಣವಾಗಿದೆ. ಇದಕ್ಕೆ ಪರ್ಯಾಯವಾಗಿ ಬಾಳೆ ನಾರಿನ ಚೀಲಗಳು ಮತ್ತಿತರ ಪರಿಸರ ಸ್ನೇಹಿ ಉತ್ಪನ್ನಗಳನ್ನು ಬಳಕೆ ಮಾಡಿದಾಗ ಮಾತ್ರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ. ಪಂಚಾಯತ್ ಮಟ್ಟದಲ್ಲಿ ಹತ್ತು ಹಲವು ಹೊಸ ಹೊಸ ಪರಿಸರ ಸ್ನೇಹಿ ಯೋಜನೆಗಳು ರೂಪಿತವಾದಾಗ ಮಾತ್ರ ಸುಸ್ಥಿರ ಜಲ ನಿರ್ವಹಣೆ ಸಾಧ್ಯವಾಗುತ್ತದೆ. ಪ್ಲಾಸ್ಟಿಕ್ ಸುಡುವದರಿಂದ ಡೈಯಾಕ್ಸಿನ್ ಎನ್ನುವ ಅನಿಲ ಬಿಡುಗಡೆಯಾಗಿ ಅದು ಮಕ್ಕಳ ಮೆದುಳಿನ ಮೇಲೆ ಅತೀವ ದುಷ್ಪರಿಣಾಮ ಉಂಟುಮಾಡುತ್ತದೆ ಹಾಗಾಗಿ ಮಕ್ಕಳಿಗೆ ಇಂದಿನಿಂದಲೇ ಪರಿಸರ ನಾಶದ ದುಷ್ಪರಿಣಾಮ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಬಳಕೆಗಳ ಬಗೆಗೆ ತಿಳಿ ಹೇಳಬೇಕು. ಸಮಾಜದ ಎಲ್ಲ ಸ್ತರಗಳಲ್ಲಿ ಈ ಚರ್ಚೆ ವ್ಯಾಪಕವಾಗಿ ನಡೆದಾಗ ಮಾತ್ರ ಸಮಗ್ರ ಜಲ ಸಂಪನ್ಮೂಲಗಳ ನಿರ್ವಹಣೆ ಸಾಧ್ಯ" ಎಂದರು.

ತರಬೇತಿಯಲ್ಲಿ 40ಕ್ಕೂ ಹೆಚ್ಚು ಪ್ರಗತಿಪರ ರೈತರು, ವಿವಿಧ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳು, ಸದಸ್ಯರುಗಳು ಪಾಲ್ಗೊಂಡು ಚರ್ಚಿಸಿ ತಮಗಿರುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡರು.

ತರಬೇತಿಯಲ್ಲಿ ಏಟ್ರೀ ಸಂಸ್ಥೆಯ ಪದಾಧಿಕಾರಿಯಾದ ಶ್ರೀ ಲಕ್ಷ್ಮೀಕಾಂತ ಮನುವಿಕಾಸ ಸಂಸ್ಥೆಯ ಯೋಜನಾ ಉಪ ನಿರ್ದೇಶಕರಾದ ಶ್ರೀ ಮಂಜುನಾಥ ಹೆಗಡೆ, ಸಿಬ್ಬಂದಿಗಳಾದ ಶ್ರೀಮತಿ ಶುಭಾ ಪೈ, ಶ್ರೀ ಪವನ ಬೊಮ್ಮನಹಳ್ಳಿ, ಶ್ರೀ ಅಶ್ವತ್ಥ್ ನಾಯ್ಕ್, ಶ್ರೀ ಗಣಪತಿ ಗಾಮದ, ಶ್ರೀ ಶೇಖರ ನಾಯ್ಕ, ಶ್ರೀ ಗಣಪತಿ ಹೆಗಡೆ, ಕುಮಾರಿ ಗೀತಾ ನಿಲೇಕಣಿ ಉಪಸ್ಥಿತರಿದ್ದರು.





# ಮನುವಿಕಾಸದಿಂದ ಮಹಿಳೆಯರಿಗೆ ಹೊಲಿಗೆ ತರಬೇತಿ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯಿಂದ ಈಡಲ್‌ಗೀವ್ ಫೌಂಡೇಶನ್ ಮತ್ತು ದಲ್ಯಾನ ಫೌಂಡೇಶನ್‌ಗಳ ಸಹಯೋಗದೊಂದಿಗೆ ದಿನಾಂಕ 02–10–2021ರಂದು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ತಾವರಗೇರಿ ಗ್ರಾಮದಲ್ಲಿ ಆಯ್ದ 30 ಮಹಿಳೆಯರಿಗೆ 60 ದಿನಗಳ ಹೊಲಿಗೆ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು.

ತರಬೇತಿಯನ್ನು ಉದ್ಘಾಟಿಸಿ ಮಾತನಾಡಿದ ತಾವರಗೇರಿಯ ಕೃಷಿ ಪತ್ತಿನ ಸಹಕಾರ ಸಂಘದ ಚೇರ್‌ಮೆನ್‌ರಾದ ಶ್ರೀ ಫಕೀರಪ್ಪಾ ಕೆಳಗೇರಿ ಮಾತನಾಡಿ "ಮನುವಿಕಾಸ ಸಂಸ್ಥೆಯು ನಮ್ಮ ಗ್ರಾಮದ ಮಹಿಳೆಯರಿಗಾಗಿ ಹೊಲಿಗೆ ತರಬೇತಿಯನ್ನು ಹಮ್ಮಿಕೊಂಡಿದ್ದು ಅತೀವ ಸಂತೋಷ ತಂದಿದೆ. ಮಹಿಳೆಯರು ಸಬಲರಾದಾಗ ಮಾತ್ರ ಗ್ರಾಮಗಳ ಅಭ್ಯುದಯ ಸಾಧ್ಯ ಪುರುಷರ ಜೊತೆಗೂಡಿ ಮಹಿಳೆಯರು ದುಡಿದಾಗ ಮಾತ್ರ ಅರ್ಥಿಕ ಅಭಿವೃದ್ಧಿ ಸಾಧ್ಯವಾಗುತ್ತದೆ" ಎಂದರು.

ಮನುವಿಕಾಸ ಸಂಸ್ಥೆಯ ವಲಯ ನಿರ್ವಾಹಕರಾದ ಶ್ರೀ ಬಸವರಾಜ ರಡ್ಡೇರ್ ಮಾತನಾಡಿ "ಮನುವಿಕಾಸ ಸಂಸ್ಥೆಯು ಕಳೆದ 18 ವರ್ಷಗಳಿಂದ ನೆಲ–ಜಲ ರಕ್ಷಣೆ, ಪರಿಸರ ಅಭಿವೃದ್ಧಿ ಮೊದಲಾದ ಜನಪರ ಕಾರ್ಯಗಳನ್ನು ಸಕ್ರಿಯವಾಗಿ ನಿರ್ವಹಿಸುತ್ತಿದೆ. ಅದರ ಜೊತೆಗೆ ಮಹಿಳೆಯರ ಸಬಲೀಕರಣ, ಅವರಲ್ಲಿ ಉದ್ಯಮಶೀಲತೆಯ ಗುಣಗಳನ್ನು ಬೆಳೆಸಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ಹತ್ತು ಹಲವಾರು ಕೌಶಲ್ಯ ಆಧಾರಿತ ತರಬೇತಿಗಳನ್ನು ಆಯೋಜಿಸುತ್ತಿದೆ, ಇದರ ಲಾಭವನ್ನು ಮಹಿಳಾ ಸಮುದಾಯ ಸರಿಯಾಗಿ ಪಡೆದುಕೊಳ್ಳಬೇಕು" ಎಂದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾದ ಶ್ರೀಮತಿ ಮಮತಾ ತಿಪ್ಪಣ್ಣವರ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸದಸ್ಯರುಗಳಾದ ಚೆನ್ನಬಸಪ್ಪ ತಿಪ್ಪಣವರ್, ನಿಜಲಿಂಗಪ್ಪ ಕಾಮಧೇನು, ಉಪಾಧ್ಯಕ್ಷರಾದ ಈರಪ್ಪಾ ಗಡಿಯಾಳ, ಮಾಜಿ ಅಧ್ಯಕ್ಷರಾದ ಶ್ರೀ ಶಿವಕಲ್ಲಪ್ಪಾ ಕಾಮಧೇನು ಮತ್ತು ಮನುವಿಕಾಸ ಸಂಸ್ಥೆಯ ಮುಂಡಗೋಡದ ತಾಲೂಕಾ ಸಂಯೋಜಕರಾದ ಗಣಪತಿ ಯಲಿವಾಳ, ಸಿಬ್ಬಂದಿಗಳಾದ ಮಿಥುನ್ ನಾಯಕ್, ಗಣಪತಿ ಗಾಮದ ಉಪಸ್ಥಿತರಿದ್ದರು.






ಮನುವಿಕಾಸ ಸಂಸ್ಥೆ, ಈಡಲ್‌ಗೀವ್ ಫೌಂಡೇಶನ್ ಮತ್ತು ದಲ್ಯಾನ್ ಫೌಂಡೇಶನ್ ವತಿಯಿಂದ ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ಮುಕ್ಕಲ ಗ್ರಾಮ ಪಂಚಾಯತಿಯ ಸಭಾಂಗಣದಲ್ಲಿ ದಿನಾಂಕ 21–10–2021 ರಂದು ರೈತ ಮಹಿಳೆಯರಿಗಾಗಿ ಒಂದು ದಿನದ ಹೈನುಗಾರಿಕಾ ಅಭಿವೃದ್ಧಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ವಲಯ ಸಂಯೋಜಕರಾದ ಶ್ರೀ ಬಸವರಾಜ ರಡ್ಡೇರ ಪ್ರಾಸ್ತಾವಿಕವಾಗಿ ಮಾತನಾಡಿ ಮನುವಿಕಾಸ ಸಂಸ್ಥೆಯು 2003 ರಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕರ್ಜಗಿ ಗ್ರಾಮದಲ್ಲಿ ಮಹಿಳಾ ಸಬಲೀಕರಣದ ಧ್ಯೇಯೋದ್ದೇಶದೊಂದಿಗೆ ಆರಂಭಗೊಂಡಿದೆ. ರೈತ ಪರವಾದಂತಹ ಅನೇಕ ಯೋಜನೆಗಳನ್ನ ಜನರಿಗೆ ತಲುಪಿಸುತ್ತಿದೆ. ಆರಂಭದಲ್ಲಿ ಸಣ್ಣ ಕೆರೆಗಳನ್ನು, ಕೃಷಿ ಹೊಂಡಗಳನ್ನ ನಿರ್ಮಿಸಿಕೊಟ್ಟಿದ್ದು, ತದನಂತರದಲ್ಲಿ ದೊಡ್ಡ ಕೆರೆಗಳ ಹೂಳೆತ್ತುವುದರ ಮೂಲಕ ಕೆರೆಗಳ ಪುನರುಜ್ಜೀವನವನ್ನು ಮಾಡುವಲ್ಲಿ ಸಂಸ್ಥೆಯ ಪಾತ್ರ ಬಹಳ ಪ್ರಮುಖವಾದದ್ದು ಎಂದು ಹೇಳಿದರು. ಹಾಗೆಯೇ ಕೋವಿಡ್ ಸಂದರ್ಭದಲ್ಲಿ ಸುಮಾರು ಆರು ಸಾವಿರಕ್ಕು ಹೆಚ್ಚು ಅಗತ್ಯ ದಿನಸಿ ವಸ್ತುಗಳ ಕಿಟ್‌ನ್ನು ಮನೆ ಮನೆಗೆ ತಲುಪಿಸಿದೆ ಎಂದು ಹೇಳಿದರು. ಗೋಕರ್ಣದಲ್ಲಿ ತರಕಾರಿ ಬೆಳೆಗಾರರಿಗೋಸ್ಕರವಾಗಿ ಎಫ್.ಪಿ.ಓ. ಮತ್ತು ಕಾರವಾರದಲ್ಲಿ ಮೀನು ಮಾರಾಟ ಮಹಿಳೆಯರಿಗಾಗಿ ಎಫ್.ಪಿ.ಓ. ಸ್ಥಾಪಿಸಿ ಅವರಿಗೆ ಹಲವು ಅನುಕೂಲತೆಗಳನ್ನು ಒದಗಿಸಿಕೊಡುವಲ್ಲಿ ಸಂಸ್ಥೆಯ ಪಾತ್ರ ಬಹಳ ಮಹತ್ವದ್ದಾಗಿದೆ ಎಂದು ಹೇಳಿದರು. ಸ್ವ ಸಹಾಯ ಸಂಘಗಳನ್ನು ಶಿರಸಿ, ಸಿದ್ದಾಪುರ, ಯಲ್ಲಾಪುರ, ಮುಂಡಗೋಡ, ಹಳಿಯಾಳ, ಅಂಕೋಲಾ, ಕಾರವಾರ, ಕುಮಟಾ, ಕಲಘಟಗಿ ಭಾಗಗಳಲ್ಲಿ ನಿರ್ಮಿಸಿ, ಸುಮಾರು 35 ಸಾವಿರಕ್ಕೂ ಅಧಿಕ ಮಹಿಳೆಯರಿಗೆ ಸಾಲ ಸೌಲಭ್ಯವನ್ನು ಒದಗಿಸಿ, ಹಲವು ಕೌಶಲ್ಯ ತರಬೇತಿಗಳನ್ನು ನಡೆಸುತ್ತಾ ಬಂದಿದೆ. ಹಲವಾರು ಮಹಿಳೆಯರು ಇದರ ಸದುಪಯೋಗವನ್ನು ಪಡೆದುಕೊಂಡಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳಿದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದಂತಹ ಮುಕ್ಕಲ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಶ್ರೀ ಲಿಂಗರೆಡ್ಡಿ ನಡುವಿನಮನಿಯವರು ಮಾತನಾಡಿ, ಕಳೆದ ವರ್ಷ ಮನುವಿಕಾಸ ಸಂಸ್ಥೆಯು ನಮ್ಮ ಪಂಚಾಯತಿಯ ವ್ಯಾಪ್ತಿಯಲ್ಲಿ ಅನಾದಿ ಕಾಲದಿಂದಲೂ ಹೂಳೆತ್ತಲು ಸಾಧ್ಯವಾಗದಂತಹ ಕೆರೆಗಳನ್ನ ಹೂಳೆತ್ತಿಸಿ ರೈತರಿಗೆ ಬಹಳಷ್ಟು ಅನುಕೂಲತೆಗಳನ್ನ ಮಾಡಿಕೊಟ್ಟಿದೆ. ಹಾಗೆಯೇ ಕೊವಿಡ್ ಸಂದರ್ಭದಲ್ಲಿ ಅಗತ್ಯ ದಿನಸಿ ವಸ್ತುಗಳ ಕಿಟ್‌ಗಳನ್ನು ಜನರಿಗೆ ನೀಡಿ ವಿತರಿಸಿ ಸಂದರ್ಭದಲ್ಲಿ ಬೆನ್ನೆಲುಬಾಗಿ ನಿಂತಿದೆ. ಸಮಾಜಕ್ಕೆ ಮನುವಿಕಾಸ ಸಂಸ್ಥೆಯ ಕೊಡುಗೆ ಬಹಳ ಅಪಾರ ಎಂದು ಹೇಳಿದರು. ನಂತರ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದಂತಹ ಕಲಘಟಗಿ ತಾಲೂಕಾ ಪಶು ವೈದ್ಯಾಧಿಕಾರಿಗಳಾದ ಡಾ. ಎಸ್.ವಿ. ಸಂಪಿ ಅವರು ಮಾತನಾಡಿ ಪ್ರಮುಖವಾಗಿ ಹೈನುಗಾರಿಕೆಯು ರೈತ ಸಮುದಾಯಕ್ಕೆ ಬಹಳ ಮುಖ್ಯವಾದಂತಹ ಕಾಯಕವಾಗಿದ್ದು, ಹೈನುಗಾರಿಕೆಯಲ್ಲಿ ಮೊದಲನೆಯದಾಗಿ ಶೆಡ್‌ಗಳ ನಿರ್ಮಾಣಕ್ಕೆ ಆದ್ಯತೆ ನೀಡಬೇಕಾಗಿದೆ, ಜಾನುವಾರುಗಳಿಗೆ ಬಿಸಿಲು ಮತ್ತು ಮಳೆಯಿಂದ ರಕ್ಷಿಸಲು ಉತ್ತಮ ಶೆಡ್‌ಗಳ ನಿರ್ಮಾಣ ಅಗತ್ಯವಾಗಿದೆ. ಅದರಲ್ಲೂ ತೆರೆದ ಶೆಡ್‌ಗಳ ನಿರ್ಮಾಣ ಉತ್ತಮವಾಗಿದೆ ಎಂದು ಹೇಳಿದರು. ಹಾಗೆಯೇ ಪ್ರಮುಖವಾಗಿ ನಮ್ಮ ದೇಶದಲ್ಲಿ ಎರಡು ಬಗೆಯ ತಳಿಗಳನ್ನ ವಿಂಗಡಿಸಬಹುದು ಒಂದು ದೇಶೀಯ ತಳಿ ಇನ್ನೊಂದು ವಿದೇಶಿಯ ತಳಿ. ವಿದೇಶೀಯ ತಳಿಗಳಲ್ಲಿ ಹೆಚ್.ಎಫ್. ಮತ್ತು ಜರ್ಸಿ ತಳಿಗಳನ್ನು ಕಾಣಬಹುದಾಗಿದೆ, ದೇಶೀ ತಳಿಗಳಲ್ಲಿ ಗಿರ್, ರೆಡ್‌ಸಿಂಧಿ, ಹಳ್ಳಿಕಾರು, ಕಿಲಾರಿ, ಜವಾರಿ ಹೀಗೆ ನಾನಾ ಬಗೆಯ ತಳಿಗಳನ್ನು ಕಾಣಬಹುದಾಗಿದೆ, ದೇಶೀ ತಳಿಗಳ ಹಾಲು ಬಹಳ ಶ್ರೇಷ್ಠವಾದದ್ದು ಎಂಬುದು ವೈಜ್ಞಾನಿಕವಾಗಿಯೂ ಸಾಬೀತಾಗಿದ್ದು, ಸಾವಯವ ಕೃಷಿಯನ್ನು ಮಾಡಬೇಕಾದರೆ ಹೈನುಗಾರಿಕೆಯ ಪಾತ್ರ ಬಹಳ ಮಹತ್ವದ್ದಾಗಿರುತ್ತದೆ. ವಿದೇಶಿ ತಳಿಗಳ ಜಾನುವಾರಗಳನ್ನು ಸಾಕಬೇಕಾದರೆ ಅವುಗಳಿಗೆ ವಿಶೇಷ ಆರೈಕೆಯ ಅಗತ್ಯತೆ ಇರುತ್ತದೆ, ದೇಶಿ ಹಸುಗಳ ಸಾಕಣಿಕೆಗೆ ವಿಶೇಷ ಆರೈಕೆಯ ಅಗತ್ಯತೆ ನೀಡಬೇಕೆಂದಿಲ್ಲ. ನಮ್ಮ ದೇಶದಲ್ಲಿ ದೇಶೀ ಹಸುಗಳ ಸಾಕಾಣಿಕೆಯು ವಿಶೇಷ ಸ್ಥಾನಮಾನವನ್ನು ಹೊಂದಿದೆ ಎಂದು ಹೇಳಿದರು. ಜಾನುವಾರುಗಳ ಖರೀದಿಯಲ್ಲಿಯೂ ರೈತರು ಬಹಳ ಜಾಗರೂಕತೆಯನ್ನು ವಹಿಸಬೇಕು. ಎಮ್ಮೆ ಸಾಕಾಣಿಕೆ ಮಾಡುವುದಾದರೆ ಮುರ್ರಾ ಹಾಗೂ ಜಾಫ್ರಾ ಬದಿ ತಳಿಗಳು ಬಹಳ ಉತ್ತಮವಾದಂತಹ ತಳಿಗಳಾಗಿದ್ದು, ಇವು ಅಧಿಕ ಹಾಲನ್ನು ಹಿಂಡುವಂತಹ ತಳಿಗಳಾಗಿವೆ. ಎಂದು ಹೇಳಿದರು. ಜಾನುವಾರುಗಳು ಬೀದಿಗೆ ಬರದಿರಲು ಕಾರಣ ಹಾಗೂ ಅದಕ್ಕೆ ಇರುವಂತಹ ಪರಿಹಾರೋಪಾಯದ ಬಗ್ಗೆ ಹೇಳಿದರು. ಕೃತಕ ಗರ್ಭಧಾರಣೆ ಹಾಗೂ ಅದರ ಮಹತ್ವ ಇದರ ಕುರಿತಾಗಿಯೂ ವಿವರಿಸಿದರು.

ಮತ್ತೋರ್ವ ಸಂಪನ್ಮೂಲ ವ್ಯಕ್ತಿಗಳಾದ ಮಿಶ್ರಕೋಟಿಯ ಡಾ.ಎಸ್ ಎಸ್ ಬಾದಾಮಿ ಅವರು ಮಾತನಾಡಿ ಜಾನುವಾರುಗಳಿಗೆ ಹಸಿರು ಮೇವು ಮತ್ತು ಒಣ ಮೇವುಗಳನ್ನು ಯೋಗ್ಯ ರೀತಿಯಲ್ಲಿ ನೀಡುವುದು ಬಹಳ ಮುಖ್ಯವಾಗಿದೆ. ಅದರಲ್ಲಿ 60% ರಷ್ಟು ಒಣ ಮೇವು, 40% ರಷ್ಟು ಹಸಿ ಮೇವು ನೀಡುವುದು, ಇದರಲ್ಲಿ ಪ್ರಮುಖವಾಗಿ ಏಕದಳ ಮತ್ತು ದ್ವಿದಳ ಮೇವುಗಳನ್ನ ಯೋಗ್ಯ ರೀತಿಯಲ್ಲಿ ನೀಡಬೇಕಾಗುತ್ತದೆ. ಏಕದಳ ಮೇವಿನಲ್ಲಿ ಪ್ರಮುಖವಾದದ್ದು ನೇಪಿಯ, ಭೊಜಾ ಹೈಬ್ರೀಡ್ ತಳಿ, ಸಜ್ಜೆ, ಗೋವಿನ ಜೋಳ, ಮೇವಿನ ಜೋಳ. ದ್ವಿದಳ ಮೇವಿನಲ್ಲಿ ಜೋಳದ ಕಣಿಕೆ, ಗೋಧಿ ಹುಲ್ಲು, ರಾಗಿ ಹೊಟ್ಟು ಪ್ರಮುಖವಾದದ್ದಾಗಿರುತ್ತದೆ ಜಾನುವಾರುಗಳಿಗೆ ಖನಿಜ ಮಿಶ್ರಣಗಳನ್ನು ನೀಡುವಾಗ ಅವುಗಳು ಹಿಂಡುವಂತಹ ಹಾಲಿನ ಪ್ರಮಾಣಕ್ಕನುಸಾರವಾಗಿ ಖನಿಜ ಮಿಶ್ರಣಗಳನ್ನು ನೀಡಬೇಕು. ಹಾಗೆಯೇ ಜಾನುವಾರುಗಳಲ್ಲಿ ಕಂಡು ಬರುವಂತಹ ರೋಗಗಳ ಬಗ್ಗೆ ಮಾತನಾಡಿ, ಸಣ್ಣ ಕರುಗಳಲ್ಲಿ ಕಂಡುಬರುವಂತಹ ಜಂತು ಹುಳು ಬಾಧೆ, ಕಾಲು ಬಾಯಿ ರೋಗ, ಹುಚ್ಚು ನಾಯಿ ಕಡಿತದಿಂದುಂಟಾಗುವಂತಹ ಸಮಸ್ಯೆಗಳು ಮತ್ತು ಅದಕ್ಕೆ ಪರಿಹಾರೋಪಾಯಗಳು, ಜಾನುವಾರುಗಳಲ್ಲಿ ಕಂಡು ಬರುವಂತಹ ಗರ್ಭಪಾತ ಮತ್ತು ನೆನೆಹಾಕುವಿಕೆ ಇವುಗಳ ಕುರಿತಾಗಿ ತರಬೇತಿಯಲ್ಲಿ ರೈತ ಮಹಿಳೆಯರಿಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಮುಕ್ಕಲ್ ಗ್ರಾಮ ಪಂಚಾಯತಿಯ ಸದಸ್ಯರಾದ ಸರೋಜ ಶಂಕರಪ್ಪ ಬಡಿಗೇರ, ಕವಿತ ಬಡಿಗೇರ, ಬಸಪ್ಪ ವಿ ಜಾಯನಗೌಡ್ರು, ಪರಶುರಾಮ ಎನ್ ಮುಳ್ಳರವಿ ಉಪಸ್ಥಿತರಿದ್ದರು. ಸಂಸ್ಥೆಯ ಸಿಬ್ಬಂದಿಯಾದ ಗಣಪತಿ ಯಲಿವಾಳರವರು ಕಾರ್ಯಕ್ರಮವನ್ನು ನಿರೂಪಿಸಿದರು, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಶ್ರೀಕಾಂತ ಹೆಗಡೆ ಮತ್ತು ಕಿರಣಕುಮಾರ ಗೌಡ ಮತ್ತು ಮುಕ್ಕಾಲ ಗ್ರಾಮದ ರೈತ ಬಾಂಧವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



# ಮನುವಿಕಾಸದಿಂದ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ದೇವಿಕೊಪ್ಪ ಗ್ರಾಮದಲ್ಲಿ ಹೈನುಗಾರಿಕೆ ತರಬೇತಿ

ಮನುವಿಕಾಸ ಸಂಸ್ಥೆ ಈಡಲ್‌ಗಿವ್ ಫೌಂಡೇಶನ್ ಹಾಗು ದಲ್ಯಾನ ಫೌಂಡೇಶನ್ ವತಿಯಿಂದ ದಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ದೇವಿಕೊಪ್ಪ ಗ್ರಾಮದಲ್ಲಿ ಒಂದು ದಿನದ ಹೈನುಗಾರಿಕಾ ತರಬೇತಿಯನ್ನು 27/11/2021 ರಂದು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಉದ್ಘಾಟಕರಾದ ಕಿರಣ್ ಮಿರ್ಜಿ ಅವರು ಮಾತನಾಡಿ, ಮನುವಿಕಾಸ ಸಂಸ್ಥೆಯು ಸಮಾಜಮುಖಿ ಕಾರ್ಯದಲ್ಲಿ ತೊಡಗಿದ್ದ ವಿಶೇಷವಾಗಿ ಮಹಿಳಾ ಸಬಲೀಕರಣಕ್ಕೆ ಸಂಬಧಿಸಿದಂತೆ ಹಲವು ರೀತಿ ತರಬೇತಿ ಕಾರ್ಯಕ್ರಮಗಳನ್ನು ನಮ್ಮ ಊರಿನ ಮಹಿಳೆಯರಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಆಯೋಜಿಸುವಂತೆ ಕೇಳಿಕೊಂಡರು. ಸಂಸ್ಥೆಯ ವಲಯ ನಿರ್ದೇಶಕರಾದ ಬಸವರಾಜ ರೆಡ್ಡೆರ್ ಅವರು ಮಾತನಾಡಿ ಕಲಘಟಗಿ ತಾಲೂಕಾ ವ್ಯಾಪ್ತಿಯಲ್ಲಿ ಈ ಬಾರಿ ಹಲವಾರು ಕೆರೆಗಳನ್ನು ಅಭಿವೃದ್ಧಿಪಡಿಸಿದ್ದು ಮಹಿಳಾ ಸಬಲೀಕರಣಕ್ಕೆ ಸಂಭದಿಸಿದಂತೆ ಹೆಚ್ಚಿನ ಆದ್ಯತೆಯನ್ನು ನೀಡಿ ಹೊಲಿಗೆ ತರಬೇತಿ, ಹೈನುಗಾರಿಕಾ ತರಬೇತಿ, ಬ್ಯೂಟಿಶಿಯನ್ ತರಬೇತಿಗಳನ್ನು ಆಯೋಜಿಸುತ್ತಾ ಬಂದಿದೆ ಎಂದು ಹೇಳಿ ಸಂಸ್ಥೆಯ ಪರಿಚಯವನ್ನು ಮಾಡಿಕೊಟ್ಟರು.




ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಮಿಶ್ರಿಕೋಟಿಯ ಡಾಕ್ಟರ್ ಶರಣಬಸವರವರು ಮಾತನಾಡಿ ಹೈನುಗಾರಿಕೆಯಲ್ಲಿ ರಾಸುಗಳಿಗೆ ಮೇವುಗಳನ್ನು ಹಾಕುವುದು ಕೂಡ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಗರ್ಭಧರಿಸಿದ ರಾಸುಗಳಿಗೆ ಹಾಗು ಹಾಲನ್ನು ಹಿಂಡುತ್ತಿರುವ ರಾಸುಗಳಿಗೆ ಯಾವ ಪ್ರಮಾಣದ ಮೇವನ್ನು ಹಾಕಬೇಕು ಹಾಗು ಜಾನುವಾರುಗಳಿಗೆ ಬರುವಂತಹ ರೋಗಗಳು ಹಾಗು ಅದರ ಲಸಿಕೆಗಳ ಬಗ್ಗೆ ವಿವರವಾಗಿ ಶಿಬಿರಾರ್ಥಿಗಳಿಗೆ ತಿಳಿಸಿದರು.ಮುಕ್ಕಾಲ ಪಶು ವೈದ್ಯಾಧಿಕಾರಿಗಳಾದ ಡಾಕ್ಟರ್ ಸುರೇಶ ಗೊಂಡೆರವರು ಮಾತನಾಡಿ ದನಕರುಗಳ ಪಾಲನೆ ಪೋಷಣೆಗಳ ಬಗ್ಗೆ ಮಾತನಾಡಿದರು. ಹಾಗು ಹೈನುಗಾರಿಕೆಗೆ ಸಂಭಂದಿಸಿದಂತೆ ಬ್ಯಾಂಕಳಿಂದ ಸರಕಾರದಿಂದ ಯಾವ ರೀತಿಯಾಗಿ ಸಾಲ ಸೌಲಭ್ಯಗಳನ್ನು ಪಡೆದುಕೊಳ್ಳಬೇಕೆಂದು ವಿವರವಾಗಿ ತಿಳಿಸಿದರು.




ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ನಿರಂಜನ ಕದಮ್,ಸಂಜಯ್ ಲಮಾಣಿ ಹಾಗೂ ಶ್ರೀಕಾಂತ ಹೆಗಡೆ ಉಪಸ್ಥಿತರಿದ್ದರು.

# ಮನುವಿಕಾಸ ಸಂಸ್ಥೆಯಿಂದ ಗೋಕರ್ಣ ತರಕಾರಿ ರೈತ ಉತ್ಪಾದಕ ಸಂಘದ ಸದಸ್ಯರಿಗೆ ಸಾವಯವ ಉತ್ಪನ್ನಗಳ ಪ್ರಾತ್ಯಕ್ಷಿಕೆ ಕಾರ್ಯಾಗಾರ




ಮನುವಿಕಾಸ ಸಂಸ್ಥೆಯ ವತಿಯಿಂದ ಪ್ರಾರಂಭವಾದ ಗೋಕರ್ಣ ತರಕಾರಿ ಬೆಳೆಗಾರರ ಸಂಘದ ಸದಸ್ಯರಿಗಾಗಿ ಸಾವಯವ ಕೃಷಿ ತರಬೇತಿ ಕಾರ್ಯಗಾರವನ್ನು 1/12/2021 ರಂದು ಗಂಗೆಕೊಳ್ಳದ ಸಮುದಾಯ ಭವನದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಾಗಾರದಲ್ಲಿ ಬೆಳಗಾವಿಯ ಅಲ್ಫನ್ ಝೈಮ್ ಸಂಸ್ಥೆಯ ಕಡೆಯಿಂದ ಇಬ್ಬರು ಸಂಪನ್ಮೂಲ ವ್ಯಕ್ತಿಗಳು ಆಗಮಿಸಿ ತಮ್ಮ ಸಂಸ್ಥೆಯ ವತಿಯಿಂದ ತಯಾರಾದ ಗೊಬ್ಬರಗಳು, ಸಾವಯವ ಉತ್ಪನ್ನಗಳು ಮತ್ತು ಕೀಟನಾಶಕಗಳನ್ನು ಪರಿಚಯಿಸಿದರು. ಅಲ್ಲದೆ ಹಲವಾರು ಔಷಧಿಗಳ ಪ್ರಾತ್ಯಕ್ಷಿಕೆಗಳನ್ನು ಸಹ ಮಾಡಿ ತೋರಿಸಿದರು. ರೈತರು ಸಹ ತಮಗಿರುವ ಗೊಂದಲಗಳಿಗೆ ಪರಿಹಾರವನ್ನು ಕಂಡುಕೊಂಡರು.

ಕಾರ್ಯಾಗಾರದಲ್ಲಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ, ನಬಾರ್ಡ ನ ಜಿಲ್ಲಾ ಅಭಿವೃದ್ಧಿ ಅಧಿಕಾರಿ ರೆಜೀಸ್ ಇಮ್ಯಾನುವಲ್, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಪವನ ಬೊಮ್ಮನಹಳ್ಳಿ, ರಮೇಶ್ ನಾಯ್ಕ, ಮಹೇಶ್ ನಾಯ್ಕ್. ಯಮುನೇಶ್ ವಡ್ಡರ್, ನಾಗರಾಜ ನಾಯ್ಕ್ ಉಪಸ್ಥಿತರಿದ್ದರು.

# ಸ್ವ ಸಹಾಯ ಸಂಘಗಳ ಪರಿಕಲ್ಪನಾ ತರಬೇತಿ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಈಡಲ್ ಗೀವ್ ಫೌಂಡೇಶನ್ ಮತ್ತು ದಲ್ಯಾನ ಫೌಂಡೇಶನ್‌ಗಳ ಸಹಯೋಗದಲ್ಲಿ ಶಿರಸಿಯ ರೋಟರಿ ಹಾಲ್‌ನಲ್ಲಿ ದಿನಾಂಕ 27-08-2021 ಸ್ವ ಸಹಾಯ ಸಂಘಗಳ ಪರಿಕಲ್ಪನಾ ತರಬೇತಿಯನ್ನು ಆಯೋಜಿಸಿತ್ತು.

ಗಿಡಕ್ಕೆ ನೀರೆರೆಯುವ ಮೂಲಕ ತರಬೇತಿಯನ್ನು ಉದ್ಘಾಟಿಸಿ. ಮಾತನಾಡಿದ ಶಿರಸಿಯ ಜಿಲ್ಲಾ ಪಂಚಾಯತಿಯ ಸದಸ್ಯರಾದ ಶ್ರೀಮತಿ. ಉಷಾ ಹೆಗಡೆ "ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಕೇವಲ ಹೆಸರಿನಿಂದಷ್ಟೇ ಅಲ್ಲದೆ ತನ್ನ ಕಾರ್ಯ ಚಟುವಟಿಕೆಗಳಿಂದ ಪ್ರಸಿದ್ಧವಾಗಿದೆ. ಸಂಸ್ಥೆಯು ಮಾಡಿರುವ ಕೆಲಸಗಳನ್ನು ಹಳ್ಳಿಗಳೇ ಮಾತಾಡುವಂತಾಗಿದ್ದು ಇದು ಮನುವಿಕಾಸ ಸಂಸ್ಥೆಯ ಕಾರ್ಯಸಾಧನೆಗೆ ಹಿಡಿದ ಕೈಗನ್ನಡಿಯಾಗಿದೆ. ಒಂದು ಜಿಲ್ಲೆಯ ಮಟ್ಟದಲ್ಲಿ ಇಷ್ಟು ಹೆಸರು ಮಾಡಿರುವ ಮನುವಿಕಾಸ ಸಂಸ್ಥೆ ಮುಂದೊಂದು ದಿನ ದೇಶಮಟ್ಟದಲ್ಲಿ ಹೆಸರು ಮಾಡುವ ದಿನ ದೂರವಿಲ್ಲ. ಇಂದು ಸಂಸ್ಥೆ ಮಹಿಳಾ ಸಬಲೀಕರಣವನ್ನೇ ಮುಖ್ಯ ಗುರಿಯಾಗಿಸಿಕೊಂಡು ಹತ್ತು ಹಲವಾರು ಕೌಶಲ್ಯ ಆಧಾರಿತ ತರಬೇತಿಗಳನ್ನು ಒದಗಿಸುತ್ತಿದ್ದು ಮಹಿಳಾ ಸಮುದಾಯವನ್ನು ಮುಖ್ಯವಾಹಿನಿಗೆ ತಂದು ಅವರಿಗೆ ಆರ್ಥಿಕ ಸ್ವಾವಲಂಬನೆಯನ್ನು ಒದಗಿಸುವ ಭರವಸೆಯನ್ನು ಮೂಡಿಸುವಲ್ಲಿ ಯಶಸ್ಸನ್ನು ಸಾಧಿಸಿದೆ. ಮಹಿಳೆಯರು ಪ್ರಯತ್ನಪಟ್ಟರೆ ಯಾವುದೂ ಅಸಾಧ್ಯವಲ್ಲ ಎನ್ನುವ ಉದಾಹರಣೆಗಳು ನಮ್ಮ ಸಮಾಜದಲ್ಲಿ ಹಲವಾರಿವೆ. ಅಂತಹ ಯಶೋಗಾಥೆಗಳನ್ನು ಅನುಸರಿಸಿ ಇಂದಿನ ಮಹಿಳೆಯರು ಸಶಕ್ತರಾಗಬೇಕಿದೆ" ಎಂದರು.

ಖ್ಯಾತ ವಕೀಲರು ಮತ್ತು ಶ್ರೀ ಮಾರಿಕಾಂಬಾ ದೇವಸ್ಥಾನದ ಧರ್ಮದರ್ಶಿ ಮಂಡಳಿಯ ಶ್ರೀಮತಿ ವತ್ಸಲಾ ಹೆಗಡೆ ಮಾತನಾಡಿ "ಸಾಮಾನ್ಯವಾಗಿ ಮಹಿಳೆಯರು ತಮಗೆ ಹಲವಾರು ಕಷ್ಟಗಳಿದ್ದರೂ ಅದನ್ನು ತೋರ್ಪಡಿಸಿಕೊಳ್ಳುವದಿಲ್ಲ. ಅದಕ್ಕೆ ಮುಖ್ಯ ಕಾರಣ ಮಾನಸಿಕ ಹಿಂಜರಿಕೆಯಾಗಿದ್ದು ಕಷ್ಟಗಳನ್ನು ಮೆಟ್ಟಿನಿಂತರೆ ಮಾತ್ರ ನಿಜವಾದ ಮಹಿಳಾ ಸಬಲೀಕರಣ ಸಾಧ್ಯ, ಇಂದು ಹಲವು ನಕಲಿ ಸಂಘ ಸಂಸ್ಥೆಗಳು ಸಂಘಗಳಿಗೆ ಸಾಲವನ್ನು ನೀಡುತ್ತೇವೆ ಎಂದು ಸುಳ್ಳು ಭರವಸೆಯನ್ನು ನೀಡಿ ಸಮುದಾಯವನ್ನು ದಾರಿ ತಪ್ಪಿಸುತ್ತಿವೆ ಆದರೆ ಮನುವಿಕಾಸ ಸಂಸ್ಥೆಯಂತಹ ಜನಪರ ಕಾಳಜಿಯುಳ್ಳ ಸಂಸ್ಥೆಗಳು ಕೇವಲ ಮಹಿಳಾ ಸಬಲೀಕರಣವಷ್ಟೇ ಅಲ್ಲದೆ ಹಲವು ಜನಸಮುದಾಯದ ಆರ್ಥಿಕ ಏಳಿಗೆಗೂ ಸಹಕಾರಿಯಾಗಿದೆ" ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಯಾದ ಶ್ರೀಮತಿ ರಾಜೇಶ್ವರಿ ಗೋಳಿಮಠ ಮಾತನಾಡಿ "ಕರ್ನಾಟಕದಲ್ಲಿ ಸ್ತ್ರೀ ಶಕ್ತಿ ಗುಂಪುಗಳು ಶುರುವಾದ ಬಗೆ ಮತ್ತು ಅದರ ಪ್ರಯೋಜನಗಳನ್ನು ವಿವರಿಸುತ್ತಾ ಸ್ತ್ರೀ ಶಕ್ತಿ ಗುಂಪುಗಳಿಗೆ ಮತ್ತು ವಿಶೇಷವಾಗಿ ಮಹಿಳೆಯರಿಗೆ ಇಲಾಖೆಯ ವತಿಯಿಂದ ಇರುವ ಸೌಲಭ್ಯಗಳಾದ ಸಾಂತ್ವನ, ಸಬಲ, ಮಾತೃವಂದನಾ, ಸ್ನೇಹಾ ಕ್ಲಿನಿಕ್, ಉದ್ಯೋಗಿನಿ, ಸಮೃದ್ದಿ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು. ಸತತ ಪರಿಶ್ರಮದಿಂದ ಮಾತ್ರ ಯಶಸ್ಸು ಸಾಧ್ಯ, ಮಹಿಳಾ ಸಬಲೀಕರಣ ಎನ್ನುವುದು ಸಮುದಾಯದ ಮತ್ತು ದೇಶದ ಅಭಿವೃದ್ಧಿಗೆ ಪೂರಕವಾಗಿದೆ" ಎಂದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಸಂಸ್ಥೆಯ ಬಗೆಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕೆಡಿಸಿಸಿ ಬ್ಯಾಂಕ್‌ನ ಸಂಘ ನಿರ್ವಾಹಕರಾದ ಶ್ರೀ ನಾಗರಾಜ ನಾಯ್ಕ್ ಮಾತನಾಡಿ " ಸ್ವ ಸಹಾಯ ಸಂಘಗಳ ಹುಟ್ಟು ಮತ್ತು ಬೆಳವಣಿಗೆಗಳನ್ನು ವಿವರಿಸುತ್ತಾ ಸಂಘದಲ್ಲಿನ ಸದಸ್ಯರ ಜವಾಬ್ದಾರಿ ಮತ್ತು ಹೊಣೆಗಾರಿಕೆಗಳು, ಸಂಘದಲ್ಲಿನ ಸದಸ್ಯರ ಬ್ಯಾಂಕಿನ ವ್ಯವಹಾರಗಳು ಯಾವ ರೀತಿಯಾಗಿ ಇರಬೇಕು ಮತ್ತು ಬ್ಯಾಂಕುಗಳು ಸಂಘಗಳಿಗೆ ಸಾಲ ನೀಡುವಾಗ ಪರಿಗಣಿಸಲಾಗುವ ಮಾನದಂಡಗಳು ಮತ್ತು ಅದಕ್ಕಿರುವ ಇತಿಮಿತಿಗಳು, ಸಾಲ ಮರುಪಾವತಿ ಮತ್ತು ಸಾಲ ವಸೂಲಾತಿಗಳ ವಿಧಗಳು ನೂತನ ಯೋಜನೆಗಳ ಲಾಭಗಳು ಸಂಘದ ಪಾಸ್ ಬುಕ್ ಮತ್ತು ಠರಾವು ಪುಸ್ತಕದ ನಿರ್ವಹಣೆ, ಸಂಘದ ಸದಸ್ಯರಿಗಿರುವ ವಿಮಾ ಸೌಲಭ್ಯಗಳ ಕುರಿತಾಗಿ ವಿವರಣೆ ನೀಡಿದರು. ಸಂಘದ ಸದಸ್ಯರು ಎಲ್ಲ ಜವಾಬ್ದಾರಿಗಳನ್ನು ಮತ್ತು ಕೆಲಸಗಳನ್ನು ಹಂಚಿಕೊಂಡರೆ ಮಾತ್ರ ಸಂಘದ ಜೊತೆಗೆ ಸ್ವಯಂ ಅಭಿವೃದ್ಧಿ ಸಾಧ್ಯ" ಎಂದರು

ಹೊಸದಾಗಿ ಸಂಘವನ್ನು ಪ್ರಾರಂಭಿಸಿದ ಸುಮಾರು 50ಕ್ಕೂ ಹೆಚ್ಚಿನ ಮಹಿಳಾ ಸದಸ್ಯರು ಈ ತರಬೇತಿಯನ್ನು ಪಡೆದರು ಮತ್ತು ತಮಗಿರುವ ಹಲವಾರು ಗೊಂದಲಗಳನ್ನು ಬಗೆಹರಿಸಿಕೊಂಡರು.

ಹಾರೂಗಾರಿನ ಶ್ರೀ ಏಕದಂತ ಸ್ವ ಸಹಾಯ ಸಂಘದ ಸದಸ್ಯರು ಪ್ರಾರ್ಥಿಸಿದರು. ಮನುವಿಕಾಸ ಸಂಸ್ಥೆಯ ಶ್ರೀ ಮಣಿಕಂಠ ಚಲವಾದಿ ನಿರೂಪಿಸಿದರು. ಶ್ರೀ ಅಶ್ವತ್ಥ ನಾಯ್ಕ ಅತಿಥಿಗಳನ್ನು ಸ್ವಾಗತಿಸಿ ಪರಿಚಯಿಸಿದರು.

ತರಬೇತಿಯಲ್ಲಿ ಕೆಡಿಸಿಸಿ ಮಹಿಳಾ ಬ್ಯಾಂಕ್‌ನ ಅನಿತಾ ನೇರ್ಲಕಟ್ಟೆ, ಕೆಡಿಸಿಸಿ ಬ್ಯಾಂಕ್‌ನ ಚಿದಾನಂದ ನಾಯ್ಕ್, ಗಣೇಶ ನೇತ್ರಾಲಯದ ಕಣ್ಣಿನ ವೈದ್ಯರಾದ ಡಾ. ನಾಗರಾಜ ಮತ್ತು ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಶ್ರೀ ಎಂ.ಜಿ. ಹೆಗಡೆ, ಶ್ರೀಮತಿ ಶುಭಾ ಪೈ, ಶ್ರೀ ಪವನ ಬೊಮ್ಮನಹಳ್ಳಿ, ಶ್ರೀ ಗಣಪತಿ ಹೆಗಡೆ, ಕು॥ ದಿವ್ಯ ಗೌಡ ಪಾಲ್ಗೊಂಡಿದ್ದರು.





# ಮಹಿಳೆಯರಿಗಾಗಿ ಬ್ಯೂಟೀಶಿಯನ್ ತರಬೇತಿ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಈಡಲ್‌ಗೀವ್ ಫೌಂಡೇಶನ್ ಮತ್ತು ದಲ್ಯಾನ ಫೌಂಡೇಶನ್‌ಗಳ ಸಹಯೋಗದೊಂದಿಗೆ ಆಯ್ದ ಮಹಿಳೆಯರಿಗಾಗಿ ಬ್ಯೂಟೀಶಿಯನ್ ತರಬೇತಿಯನ್ನು ದಿನಾಂಕ 30–09–2021 ರಂದು ಅಂಕೋಲಾದಲ್ಲಿ ಹಮ್ಮಿಕೊಂಡಿತ್ತು. ಮುಖ್ಯ ಅತಿಥಿಗಳಾಗಿ ಶ್ರೀಮತಿ ಮಾಲತಿ ಆಚಾರಿ ಮುಖ್ಯಾದ್ಯಾಪಕಿ, ಹಿರಿಯ ಪ್ರಾಥಮಿಕ ಶಾಲೆ. ಶ್ರೀಮತಿ ಲಲಿತಾ ಆರ್, ಅಂಗನವಾಡಿ ಶಿಕ್ಷಕಿ ಉದ್ಘಾಟನೆಗೆ ಆಗಮಿಸಿದ್ದರು.

ಮನುವಿಕಾಸ ಸಂಸ್ಥೆಯ ವಲಯ ನಿರ್ವಾಹಕರಾದ ಶ್ರೀ ಬಸವರಾಜ ರಡ್ಡೇರ್ ಮಾತನಾಡಿ "ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಕಳೆದ 18 ವರ್ಷಗಳಿಂದ ನೆಲ–ಜಲ ಸಂರಕ್ಷಣೆ, ಪರಿಸರ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ಹಲವಾರು ಕಾರ್ಯಚಟುವಟಿಕೆಗಳನ್ನು ರೂಪಿಸಿದೆ. ಈಗಾಗಲೇ ಉತ್ತರ ಕನ್ನಡ, ಹಾವೇರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನಗೊಳಿಸಿ ರೈತ ಸಮುದಾಯದ ನೀರಿನ ದಾಹವನ್ನು ನೀಗಿಸಿದೆ. ಮಹಿಳಾ ಸಬಲೀಕರಣವನ್ನೇ ಮುಖ್ಯ ಗುರಿಯಾಗಿಸಿಕೊಂಡು ಕೆಲಸಮಾಡುತ್ತಿರುವ ನಮ್ಮ ಸಂಸ್ಥೆ, ಮಹಿಳೆಯರು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ಬೇಕಾದ ಕೌಶಲ್ಯ ಆಧಾರಿತ ತರಬೇತಿಗಳನ್ನು ಆಯೋಜಿಸಿ, ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂದರು.




ಇಂದು ಉದ್ಘಾಟನೆಗೊಂಡಿರುವ ತರಬೇತಿಯು ಸತತ 30 ದಿನಗಳ ಕಾಲ ನಡೆಯಲಿದ್ದು ಆಯ್ದ 18 ಮಹಿಳೆಯರು ಇದರ ಪ್ರಯೋಜನ ಪಡೆಯಲಿದ್ದು, ಮುಂಬರುವ ದಿನಗಳಲ್ಲಿ ಇದನ್ನು ಸ್ವ ಉದ್ಯೋಗವನ್ನಾಗಿಸಿಕೊಂಡು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಸಂಯೋಜಕರಾದ ಶ್ರೀ ಗೋಪಾಲ್ ಬಾಡಕರ್, ಕುಮಾರಿ ತೃಪ್ತಿ ಕೇರ್‌ಕರ್, ಶ್ರೀಮತಿ ಸುಲಕ್ಷಾ ಬಾನಾವಳಿ ಹಾಜರಿದ್ದರು.

# ಗೋಕರ್ಣ ತರಕಾರಿ ಬೆಳೆಗಾರರ ರೈತ ಉತ್ಪಾದಕರ ಸಂಘ (ರಿ) ವಾರ್ಷಿಕ ಸರ್ವಸಾಧಾರಣ ಸಭೆ






ಮನುವಿಕಾಸ ಸಂಸ್ಥೆ ಬೆಂಬಲಿತ ಗೋಕರ್ಣ ತರಕಾರಿ ಬೆಳೆಗಾರರ ರೈತ ಉತ್ಪಾದಕರ ಸಂಘ (ರಿ) ಇದರ ವಾರ್ಷಿಕ ಸರ್ವಸಾಧಾರಣ ಸಭೆಯು ದಿನಾಂಕ 28/09/2021 ರಂದು ಗಂಗೆಕೊಳ್ಳ ಸಮುದಾಯ ಭವನದಲ್ಲಿ ನಡೆಯಿತು.

ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ರವರು ಹಾಗೂ ಗೋಕರ್ಣ ಎ.ಪಿ.ಎಮ್.ಸಿ.ಯ ಸದಸ್ಯರಾದ ಮನೀಹರ ಗೌಡರವರು ಹಾಗೂ ಗೋಕರ್ಣ ತರಕಾರಿ ಬೆಳೆಗಾರರ ರೈತ ಉತ್ಪಾದಕರ ಸಂಘದ ಎಲ್ಲಾ ಆಡಳಿತ ಮಂಡಳಿ ಸದಸ್ಯರು ಬಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಕಳೆದ ಒಂದು ವರ್ಷದಿಂದ ಮನುವಿಕಾಸ ಸಂಸ್ಥೆಯ ಮುಖೇನ ರೈತ ಉತ್ಪಾದಕ ಸಂಘದಲ್ಲಿ ನಡೆದ ಕಾರ್ಯ ಚಟುವಟಿಕೆಗಳ ಬಗ್ಗೆ ಸಂಸ್ಥೆಯ ನಿರ್ದೇಶಕರು ಪ್ರಾಸ್ತಾವಿಕವಾಗಿ ಮಾತನಾಡಿ ವಿವರಿಸಿದರು. ಸಭೆಯಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಶ್ರೀನಿವಾಸ ನಾಯಕ್ ರವರು ಮಾತನಾಡಿ ಸಂಸ್ಥೆಯು ಕಳೆದ ವರ್ಷ ಆಡಳಿತ ಮಂಡಳಿ ಸದಸ್ಯರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿತ್ತು ಅಲ್ಲದೇ ಪ್ರತಿ 3 ತಿಂಗಳಿಗೊಮ್ಮೆ ಆಡಳಿತ ಮಂಡಳಿಯ ಸಭೆ ನಡೆಸಿ ಮುಂಬರುವ ದಿನಗಳಲ್ಲಿ ಆಗಬೇಕಾದ ಕಾರ್ಯಚಟುವಟಿಕೆಗಳನ್ನು ಅವಲೋಕಿಸಲಾಗುತ್ತಿದೆ. ಇನ್ನು ಮುಂದೆಯೂ ಸಮಯಾನುಸಾರ ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲು ಮತ್ತು ರೈತರಿಗೆ ಸೂಕ್ತ ಸಮಯದಲ್ಲಿ ಗೊಬ್ಬರ, ಬೀಜಗಳು ಮತ್ತು ಇನ್ನಿತರ ಪೂರಕ ಸರಕುಗಳನ್ನು ಒದಗಿಸುವದರ ಮೂಲಕ ಅವರ ಆದಾಯವನ್ನು ಹೆಚ್ಚಿಸಿ ಅವರ ಬೆಳೆಗಳ ಮೌಲ್ಯವರ್ಧನೆ ಮಾಡಬೇಕು ಹಾಗೆಯೇ ರೈತರು ಬೆಳೆದ ಬೆಳೆಗಳನ್ನು ದಾಸ್ತಾನು ಮಾಡಲು ಸೂಕ್ತ ಗೋದಾಮಿನ ವ್ಯವಸ್ಥೆ ಕೂಡ ಆಗಬೇಕು ಎಂದರು.

# ಮನುವಿಕಾಸದಿಂದ ಕಲಘಟಗಿಯಲ್ಲಿ ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ತರಬೇತಿ




ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಹನ್ಸ್ ಸೀಡಲ್ ಫೌಂಡೇಶನ್ ಇಂಡಿಯಾ ಅವರ ಸಹಯೋಗದೊಂದಿಗೆ 17–11–2021 ರಂದು ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಅಂಬೇಡ್ಕರ ಸಭಾಭವನದಲ್ಲಿ ಒಂದು ದಿನದ ಸಮಗ್ರ ಜಲ ಸಂಪನ್ಮೂಲ ನಿರ್ವಹಣಾ ತರಬೇತಿಯನ್ನು ಹಮ್ಮಿಕೊಂಡಿತ್ತು.

ಕಾರ್ಯಕ್ರಮದ ಉದ್ಘಾಟಕರಾಗಿ ಆಗಮಿಸಿದಂತಹ ಮುಖ್ಯ ಕಾರ್ಯನಿರ್ವಾಹಕ ಅಭಯಂತರರಾದಂತಹ ಶ್ರೀ ಎಸ್. ಸಿ. ಮಠಪತಿ ಅವರು ಜಲ ಎಂಬುದು ದೇವರು ನಮಗೆ ಕೊಟ್ಟಂತಹ ವರ ಇದನ್ನು ನಾವು ಮಿತವಾಗಿ ಬಳಸಬೇಕು ಒಬ್ಬ ಮನುಷ್ಯ ಊಟವಿಲ್ಲದೆ ನಾಲ್ಕರಿಂದ ಐದು ದಿನ ಬದುಕಬಹುದು. ವಾಹನಗಳಲ್ಲಿ ಸಂಚರಿಸದೆ ಬದುಕಬಹುದು ಆದರೆ ಮನುಷ್ಯನ ದೇಹ ನಡೆಯಲು ನೀರು ತುಂಬಾ ಅತ್ಯವಶ್ಯಕ. ಹೀಗಾಗಿ ನೀರನ್ನು ಮಿತವಾಗಿ ಬಳಸಬೇಕು ಮತ್ತು ನೀರಿನ ಮೂಲಗಳಾದ ಕೆರೆ, ಬಾವಿ, ಹಳ್ಳ–ಕೊಳ್ಳಗಳ ರಕ್ಷಣೆ ಹಾಗೂ ಅವುಗಳ ಅಭಿವೃದ್ಧಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು.

ಕಲಘಟಗಿ ತಾಲೂಕಿನ ಸಹಾಯಕ ಅಭಯಂತರರು ಆದಂತಹ ಶ್ರೀ ವಿಜಯ ಕುಮಾರ ಅವರು ಮಾತನಾಡಿ ಈಗಿನ ಜಾಗತಿಕ ಮಟ್ಟದಲ್ಲಿ ಪೆಟ್ರೋಲ ಡಿಸೇಲ್ ಇವುಗಳು ಜೀವನದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಭಾವಿಸುತ್ತಾರೆ ಆದರೆ ಎಲ್ಲದಕ್ಕಿಂತಲೂ ಹೆಚ್ಚಿನದಾಗಿ ನೈಸರ್ಗಿಕವಾಗಿ ಸಿಗುವಂತಹ ನೀರು, ಮಣ್ಣು, ಗಾಳಿ ಇವುಗಳು ಅವೆಲ್ಲಕ್ಕಿಂತ ಹೆಚ್ಚಿನ ಪಾತ್ರವಹಿಸುತ್ತದೆ. ಪೆಟ್ರೋಲ್, ಬಂಗಾರ ಇವುಗಳಿಲ್ಲದೇ ಮನುಷ್ಯ ಬದುಕಬಹುದು.ಆದರೆ ನೀರಿನ ಕಾಯಗಳು ಬತ್ತಿ ಹೋದರೆ ಜನರ ಜೀವನಮಟ್ಟ, ಪರಿಸರದ ವೈವಿಧ್ಯತೆ ಹಾಳಾಗುತ್ತದೆ. ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಗೆ ಒತ್ತು ನೀಡುತ್ತಿರುವ ಸಂಘ ಸಂಸ್ಥೆಗಳನ್ನು ಈ ಸಂದರ್ಭದಲ್ಲಿ ಶ್ಲಾಘಿಸಲೇ ಬೇಕು ಎಂದರು.




ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದಂತಹ ಶ್ರೀಯುತ ಗಣಪತಿ ಭಟ್ಟ ಅವರು ಸಂಸ್ಥೆಯ ಬಗೆಗೆ ಪ್ರಾಸ್ತಾವಿಕವಾಗಿ ಮಾತನಾಡಿದರು

ಕಾರ್ಯಕ್ರಮವನ್ನು ಮನುವಿಕಾಸ ಸಂಸ್ಥೆಯ ಸಿಬ್ಬಂದಿಯಾದ ಶೇಖರ ನಾಯ್ಕ ಅವರು ನಿರೂಪಿಸಿದರು. ಕಲಘಟಗಿ ತಾಲೂಕಿನ ಸಿಬ್ಬಂದಿಗಳಾದ ಮಂಜುನಾಥ ತೊರ್ಲೇಕರ್, ಸಂಜಯ ಲಮಾಣಿ ಕಾರ್ಯಕ್ರಮವನ್ನು ಸಂಘಟಿಸಿದರು. ಮನುವಿಕಾಸ ಸಂಸ್ಥೆಯ ಯೋಜನಾ ಅಧಿಕಾರಿಗಳಾದ ಪವನ್ ಬೊಮ್ಮನಹಳ್ಳಿ, ಸಿಬ್ಬಂದಿಗಳಾದ ಗಣಪತಿ ಗಾಮದ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಬೇಗೂರ, ತುಮರಿಕೊಪ್ಪ, ದೇವಿಕೊಪ್ಪ ಸೇರಿದಂತೆ ಕಲಘಟಗಿ ತಾಲೂಕಿನ ಅನೇಕ ಗ್ರಾಮದ ರೈತ ಬಾಂಧವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

# ಮನುವಿಕಾಸದಿಂದ ಮಹಿಳೆಯರಿಗಾಗಿ ಸ್ವ ಸಹಾಯ ಸಂಘಗಳ ಒಕ್ಕೂಟ ಸಭೆ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯ ವತಿಯಿಂದ ಈಡಲ್ ಗೀವ್ ಫೌಂಡೇಶನ್ ಹಾಗೂ ದಲ್ಯಾನ್ ಫೌಂಡೇಶನ್ ಗಳ ಸಹಯೋಗದಲ್ಲಿ ಹುಲೇಕಲ್ ಭಾಗದ ಮನುವಿಕಾಸ ಸಂಸ್ಥೆಯ ಮಹಿಳಾ ಸ್ವ ಸಹಾಯ ಸಂಘಗಳ ಒಕ್ಕೂಟ ಸಭೆಯನ್ನು ದಿನಾಂಕ 11/08/2021 ರಂದು ಹುಲೇಕಲ್ ಗ್ರಾಮ ಪಂಚಾಯ ಸಭಾಭವನದಲ್ಲಿ ಏರ್ಪಡಿಸಲಾಗಿತ್ತು.



ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ತಾಲೂಕಾ ಸಂಯೋಜಕರಾದ ಶ್ರೀ ಅಶ್ವತ್ಥ್ ನಾಯ್ಕ್ ಮಾತನಾಡಿ " ಹೊಸ ಸಂಘದ ಸದಸ್ಯರಿಗೆ ಮನುವಿಕಾಸ ಸಂಸ್ಥೆಯ ಹಿನ್ನೆಲೆ ಹಾಗೂ ಪರಿಚಯ ಮಾಡಿಕೊಟ್ಟರು. ಸಂಸ್ಥೆಯ ಕಾರ್ಯಚಟುವಟಿಕೆ ಹಾಗೂ ತರಬೇತಿ ಮತ್ತು ಸೌಲಭ್ಯಗಳ ಕುರಿತು ಒಕ್ಕೂಟ ಸಭೆಯಲ್ಲಿ ವಿವರಿಸಿದರು. ಇದರ ಜೊತೆಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮದ (MGNREGA) ಮಾಹಿತಿಯನ್ನು ಸಂಘದ ಸದಸ್ಯರಿಗೆ ನೀಡಲಾಯಿತು.

ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಶ್ರೀ ಮಣಿಕಂಠ ಚಲವಾದಿ ಎಲ್ಲರನ್ನು ಸ್ವಾಗತಿಸಿದರು. ಶ್ರೀ ಶ್ರೀಕಾಂತ ಹೆಗಡೆಯವರು ವಂದಿಸಿದರು.

# ಮನುವಿಕಾಸದಿಂದ ಸಿದ್ದಾಪುರದ ತಾಲೂಕಿನ ಆಯ್ದ ಮಹಿಳೆಯರಿಗೆ ಒಂದು ದಿನದ ಹೈನುಗಾರಿಕೆ ತರಬೇತಿ



ದಿನಾಂಕ 18–08–2021 ರಂದು ಸಿದ್ದಾಪುರದ ವಡಗೇರಿ ಸಭಾ ಭವನದಲ್ಲಿ ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಈಡಲ್ ಗೀವ್ ಫೌಂಡೇಶನ್ ಮತ್ತು ದಲ್ಯಾನ್ ಫೌಂಡೇಶನ್‌ಗಳ ಸಹಯೋಗದೊಂದಿಗೆ ಸಿದ್ದಾಪುರ ತಾಲೂಕಿನ ಆಯ್ದ ಮಹಿಳೆಯರಿಗೆ ಒಂದು ದಿನದ ಹೈನುಗಾರಿಕೆ ತರಬೇತಿಯನ್ನು ಆಯೋಜಿಸಿತ್ತು.

ಶಿರಸಿಯ ಪಶು ಸಂಗೋಪನಾ ಇಲಾಖೆಯ ಅಧಿಕಾರಿಯಾದ ಡಾ.ಗಣೇಶ ಹೆಗಡೆ ಮಾತನಾಡಿ ಜಾನುವಾರುಗಳಿಗೆ ಬರುವ ಕಾಲುವಡೆ ಬಾಯಿವಡೆ ಹಾಗೂ ಇನ್ನಿತರ ರೋಗ ಲಕ್ಷಣಗಳನ್ನು ಗುರುತಿಸುವಿಕೆ ಹಾಗೂ ತಡೆಗಟ್ಟುವಿಕೆಯ ಬಗೆಗೆ ಮಾಹಿತಿಯನ್ನು ನೀಡಿದರು. ಹೈನುಗಾರಿಕೆಯಲ್ಲಿ ಪ್ರಮುಖವಾಗಿ ಹಾಲಿನ ಇಳುವರಿಯನ್ನು ಹೆಚ್ಚಿಸಲು ಯಾವ ತರಹದ ಮಿಶ್ರ ತಳಿಯ ಜಾನುವಾರುಗಳಿಂದ ಹಾಲಿನ ಉತ್ಪಾದನೆ ಜಾಸ್ತಿ ಬರುವುದಾಗಿ ತಿಳಿಸಿದರು ಮತ್ತು ಒಣ ಮೇವು ಸಂತುಲಿತ ಪ್ರಮಾಣದಲ್ಲಿ ಕೊಟ್ಟಾಗ ಹಾಲಿನ ಉತ್ಪಾದನೆ ಜಾಸ್ತಿಯಗುತ್ತದೆ. ಇದು ಸಂಘದ ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಸಹಕಾರಿ ಯಾಗುತ್ತದೆ" ಎಂದರು.

ಸಿದ್ದಾಪುರದ ಪಶು ಆಸ್ಪತ್ರೆಯ ಅಧಿಕಾರಿಯಾದ ಡಾ. ಶ್ರೇಯಸ್ ಮಾತನಾಡಿ "ಇಲಾಖೆಯಿಂದ ರೈತ ಮಹಿಳೆಯರಿಗೆ ಸಿಗುವ ಸಾಲ ಸೌಲಭ್ಯಗಳು, ಕುರಿ, ಕೋಳಿಗಳಿಗೆ ಬರುವ ರೋಗ ಲಕ್ಷಣಗಳು ಮತ್ತು ಪರಿಹಾರೋಪಾಯಗಳ ಕುರಿತು ವಿವರಣೆ ನೀಡಿದರು.

ಕೃಷಿ ಇಲಾಖೆಯ ಶ್ರೀ ಯುಸೂಫ್‌ರವರು ತಮ್ಮ ಇಲಾಖೆಯಿಂದ ಲಭ್ಯವಿರುವ ಸೌಲಭ್ಯಗಳ ಕುರಿತು ವಿವರಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಸುಮಾರು 50 ಕ್ಕೂ ಹೆಚ್ಚು ರೈತ ಮಹಿಳೆಯರು ತರಬೇತಿಯ ಪ್ರಯೋಜನ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ವಲಯ ನಿರ್ವಾಹಕರಾದ ಶ್ರೀ ಬಸವರಾಜ ರಡ್ಡೇರ್, ಸಿಬ್ಬಂದಿಗಳಾದ ಸೂರ್ಯನಾರಾಯಣ ಹೆಗಡೆ. ಪುನೀತ್ ನಾಯ್ಕ್, ಶೇಖರ್ ನಾಯ್ಕ್ ಉಪಸ್ಥಿತರಿದ್ದರು.



# ಅಂಕೋಲದಲ್ಲಿ ಮನುವಿಕಾಸದಿಂದ ಕೋವಿಡ್ ಲಸಿಕಾ ಅಭಿಯಾನದ ಸ್ವಯಂ ಸೇವಕರಿಗೆ ತರಬೇತಿ ಕಾರ್ಯಕ್ರಮ

ಮನುವಿಕಾಸ ಸಂಸ್ಥೆ ಹಾಗೂ ಅಜಿಂ ಪ್ರೇಮ್‌ಜಿ ಫೌಂಡೇಶನ್ ಸಹಯೋಗದಲ್ಲಿ ದಿನಾಂಕ 24–11–2021 ರಂದು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಹೊಟೆಲ್ ಕಾಮತ್ ಪ್ಲಸ್ ಸಭಾಂಗಣದಲ್ಲಿ ಕೋವಿಡ್ ಲಸಿಕಾ ಅಭಿಯಾನದ ಸ್ವಯಂ ಸೇವಕರಿಗೆ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಉತ್ತರ ಕನ್ನಡ ಜಿಲ್ಲೆಯ–ಯಲ್ಲಾಪುರಸಿದ್ದಾಪುರ ಹಾಗೂ ಅಂಕೋಲಾ ತಾಲೂಕಿನ ಆಯ್ದ ಪ್ರಾಥಮಿಕ ಆರೋಗ್ಯಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸಿದ ಸ್ವಯಂ ಸೇವಕರು ತರಬೇತಿಯಲ್ಲಿ ಭಾಗವಹಿಸಿದ್ದರು.

ಕಾರ್ಯಾಗಾರದಲ್ಲಿ ಮನುವಕಾಸ ಸಂಸ್ಥೆಯ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಮಾತನಾಡಿ" ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಕಳೆದ 18 ವರ್ಷಗಳಿಂದ ನೆಲ–ಜಲ ಸಂರಕ್ಷಣೆ, ಪರಿಸರ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ಹಲವಾರು ಕಾರ್ಯಚಟುವಟಿಕೆಗಳನ್ನು ರೂಪಿಸಿದ್ದು, ಈಗಾಗಲೇ ಉತ್ತರ ಕನ್ನಡ, ಹಾವೇರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನಗೊಳಿಸಿ ರೈತ ಸಮುದಾಯದ ನೀರಿನ ದಾಹವನ್ನು ನೀಗಿಸಿದೆ. 3000ಕ್ಕೂ ಹೆಚ್ಚು ಸಣ್ಣ ಕೃಷಿ ಹೊಂಡಗಳ ನಿರ್ಮಾಣದಿಂದ ನೀರಿನ ನಿಶ್ಚಿಂತೆಗೆ ಕಾರಣವಾಗಿದೆ. ಮಹಿಳಾ ಸಬಲೀಕರಣವನ್ನೇ ಮುಖ್ಯ ಗುರಿಯಾಗಿಸಿಕೊಂಡು ಕೆಲಸಮಾಡುತ್ತಿರುವ ನಮ್ಮ ಸಂಸ್ಥೆ, ಮಹಿಳೆಯರು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ಬೇಕಾದ ಕೌಶಲ್ಯ ಆಧಾರಿತ ತರಬೇತಿಗಳನ್ನು ಆಯೋಜಿಸಿ ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಕೋವಿಡ್ ಲಸಿಕೆಯನ್ನು ಎಲ್ಲ ಸ್ತರದ ಸಮುದಾಯಗಳಿಗೆ ಸರಿಯಾದ ರೀತಿಯಲ್ಲಿ ತಲುಪಿಸುವ ನಿಟ್ಟಿನಲ್ಲಿ ಈಗಾಗಲೇ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಉಚಿತ ವಾಹನ ಸೇವೆಯನ್ನು ಜನರಿಗಾಗಿ ಸಂಸ್ಥೆ ಒದಗಿಸಿಸುತ್ತಿದೆ. ಅದರ ಪ್ರಯೋಜನವನ್ನು ಜನಸಮುದಾಯ ಪಡೆಯಬೇಕಿದೆ, ಮನೆ–ಮನೆ ಸಮೀಕ್ಷೆ ನಡೆಸಿ ಜನಸಮುದಾಯವನ್ನು



ಕೋವಿಡ್ ರಹಿತ ಸಮಾಜದ ನಿರ್ಮಾಣದತ್ತ ಕರೆ ತರಲು ಸ್ವಯಂ ಸೇವಕರ ಪಾತ್ರ ಅತ್ಯಗತ್ಯವಾಗಿದ್ದು, ಉತ್ತರ ಕನ್ನಡ ಜಿಲ್ಲೆಯನ್ನು ಕೋವಿಡ್ ಮುಕ್ತ ಜಿಲ್ಲೆಯನ್ನಾಗಿಸಲು ಮನುವಿಕಾಸ ಸಂಸ್ಥೆಯು ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದೆ ಎಂದರು.

ಕಾರ್ಯಾಗಾರದಲ್ಲಿ ಸ್ವಯಂ ಸೇವಕರ ಗುಂಪುಗಳನ್ನು ರಚಸಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಜನರು ಹಿಂದೇಟು ಹಾಕಲು ಇರಲು ಕಾರಣಗಳು, ಮೂಢ ನಂಬಿಕೆಗಳು, ಇಲ್ಲಿಯವರೆಗೂ ಜಿಲ್ಲೆಯಲ್ಲಿ ಕೋವಿಡ್ ಲಸಿಕೆ ಯಶಸ್ವಿಯಾಗದಿರಲು ಕಾರಣಗಳು, ಅದನ್ನು ಹೋಗಲಾಡಿಸಲು ಮನುವಿಕಾಸ ಸಂಸ್ಥೆಯಿಂದ ಹಮ್ಮಿಕೊಳ್ಳಲಾಗುವ ಪೂರಕ ಚಟುವಟಿಕೆಗಳ ಕುರಿತು ಸಮಗ್ರವಾಗಿ ಚರ್ಚಿಸಲಾಯಿತು.

30ಕ್ಕೂ ಹೆಚ್ಚು ಸ್ವಯಂ ಸೇವಕರು ಕಾರ್ಯಾಗಾರದಲ್ಲಿ ತರಬೇತಿಯನ್ನು ಪಡೆದುಕೊಂಡರು. ಕಾರ್ಯಾಗಾರದಲ್ಲಿ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಪವನ ಬೊಮ್ಮನಹಳ್ಳಿ, ಶ್ರೀಕಾಂತ್ ಹೆಗಡೆ, ಮಹೇಶ್ ನಾಯ್ಕ್ ಮತ್ತು ಸುನೀತಾ ಫರ್ನಾಂಡಿಸ್ ಉಪಸ್ಥಿತರಿದ್ದರು

# ಮನುವಿಕಾಸದಿಂದ ಹಳಿಯಾಳ ಮತ್ತು ಜೋಯಿಡಾ ತಾಲೂಕಿನ ಕೋವಿಡ್ ಲಸಿಕಾ ಸ್ವಯಂ ಸೇವಕರಿಗಾಗಿ ಒಂದು ದಿನದ ಕಾರ್ಯಾಗಾರ








ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಅಜೀಂ ಪ್ರೇಮ್ ಜಿ ಫೌಂಡೇಶನ್ ಸಹಯೋಗದೊಂದಿಗೆ ಹಳಿಯಾಳ ತಾಲೂಕಿನ ವಿಠಲ ರುಕ್ಮಿಣಿ ಸಭಾ ಭವನದಲ್ಲಿ ದಿನಾಂಕ 22/11/2021ರಂದು ಕೋವಿಡ್ ಲಸಿಕಾ ಅಭಿಯಾನದ ಅಂಗವಾಗಿ ಹಳಿಯಾಳ ಮತ್ತು ಜೋಯಿಡಾ ತಾಲೂಕಿನ ಸ್ವಯಂ ಸೇವಕರಿಗಾಗಿ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಂಡಿತ್ತು.

ಕಾರ್ಯಾಗಾರದಲ್ಲಿ ಮನುವಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಮಾತನಾಡಿ ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಕಳೆದ 18 ವರ್ಷಗಳಿಂದ ನೆಲ–ಜಲ ಸಂರಕ್ಷಣೆ, ಪರಿಸರ ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ ಕ್ಷೇತ್ರದಲ್ಲಿ ಹಲವಾರು ಕಾರ್ಯಚಟುವಟಿಕೆಗಳನ್ನು ರೂಪಿಸಿದ್ದು, ಈಗಾಗಲೇ ಉತ್ತರ ಕನ್ನಡ, ಹಾವೇರಿ, ಧಾರವಾಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅವಸಾನದ ಅಂಚಿನಲ್ಲಿರುವ ಕೆರೆಗಳ ಪುನರುಜ್ಜೀವನಗೊಳಿಸಿ ರೈತ ಸಮುದಾಯದ ನೀರಿನ ದಾಹವನ್ನು ನೀಗಿಸಿದೆ. 3000ಕ್ಕೂ ಹೆಚ್ಚು ಸಣ್ಣ ಕೃಷಿ ಹೊಂಡಗಳ ನಿರ್ಮಾಣದಿಂದ ನೀರಿನ ನಿಶ್ಚಿಂತೆಗೆ ಕಾರಣವಾಗಿದೆ. ಮಹಿಳಾ ಸಬಲೀಕರಣವನ್ನೇ ಮುಖ್ಯ ಗುರಿಯಾಗಿಸಿಕೊಂಡು ಕೆಲಸ ಮಾಡುತ್ತಿರುವ ನಮ್ಮ ಸಂಸ್ಥೆ, ಮಹಿಳೆಯರು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಲು ಬೇಕಾದ ಕೌಶಲ್ಯ ಆಧಾರಿತ ತರಬೇತಿಗಳನ್ನು ಆಯೋಜಿಸಿ ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಕೋವಿಡ್ ಲಸಿಕೆಯನ್ನು ಎಲ್ಲ ಸ್ತರದ ಸಮುದಾಯಗಳಿಗೆ ಸರಿಯಾದ ರೀತಿಯಲ್ಲಿ ತಲುಪಿಸುವ ನಿಟ್ಟಿನಲ್ಲಿ ಈಗಾಗಲೇ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಉಚಿತ ವಾಹನ ಸೇವೆಯನ್ನು ಜನರಿಗಾಗಿ ಸಂಸ್ಥೆ ಒದಗಿಸಿಸುತ್ತಿದೆ. ಅದರ ಪ್ರಯೋಜನವನ್ನು ಜನಸಮುದಾಯ ಪಡೆಯಬೇಕಿದೆ. ಮನೆ ಮನೆ ಸಮೀಕ್ಷೆ ನಡೆಸಿ ಜನಸಮುದಾಯವನ್ನು ಕೋವಿಡ್ ರಹಿತ ಸಮಾಜದ ನಿರ್ಮಾಣದತ್ತ ಕರೆತರಲು ಸ್ವಯಂ ಸೇವಕರ ಪಾತ್ರ ಅತ್ಯಗತ್ಯವಾಗಿದ್ದು, ಉತ್ತರ ಕನ್ನಡ ಜಿಲ್ಲೆಯನ್ನು ಕೋವಿಡ್ ಮುಕ್ತ ಜಿಲ್ಲೆಯನ್ನಾಗಿಸಲು ಮನುವಿಕಾಸ ಸಂಸ್ಥೆಯ ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದೆ ಎಂದರು.

ಕಾರ್ಯಾಗಾರದಲ್ಲಿ ಸ್ವಯಂ ಸೇವಕರ ಗುಂಪುಗಳನ್ನು ರಚಿಸಿ ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಜನರು ಹಿಂದೇಟು ಹಾಕಲು ಇರಲು ಕಾರಣಗಳು, ಮೂಢ ನಂಬಿಕೆಗಳು, ಇಲ್ಲಿಯವರೆಗೂ ಜಿಲ್ಲೆಯಲ್ಲಿ ಕೋವಿಡ್ ಲಸಿಕೆ ಯಶಸ್ವಿಯಾಗದಿರಲು ಕಾರಣಗಳು, ಅದನ್ನು ಹೋಗಲಾಡಿಸಲು ಮನುವಿಕಾಸ ಸಂಸ್ಥೆಯಿಂದ ಹಮ್ಮಿಕೊಳ್ಳಲಾಗುವ ಪೂರಕ ಚಟುವಟಿಕೆಗಳ ಕುರಿತು ಸಮಗ್ರವಾಗಿ ಚರ್ಚಿಸಲಾಯಿತು.

ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಆರೋಗ್ಯಾಧಿಕಾರಿಗಳಾದ ಶ್ರೀ ಮನೋಹರ ಅವರು ಭಾಗವಹಿಸಿ ವೈರಸ್‌ನಿಂದ ಬರುವಂತ ಅನೇಕ ರೋಗಗಳು ಸಹ ನಮ್ಮ ದೇಶದಲ್ಲಿವೆ ಕೋವಿಡ್ ಒಂದು ವೈರಸ್‌ನಿಂದ ಬರುವಂತಹ ರೋಗವಾದರೂ ಅದರ ಹರಡುವ ವ್ಯಾಪ್ತಿ ಹೆಚ್ಚಾಗಿರುವುದರಿಂದ ಜನರಿಗೆ ಭಯ ಹೆಚ್ಚಾಗಿದೆ. 18 ವರ್ಷ ಮೇಲ್ಪಟ್ಟವರೆಲ್ಲಾ ಕೊವಿಡ್ ಲಸಿಕೆ ಪಡೆಯುವುದು ಕಡ್ಡಾಯವಾಗಿದೆ. ತಮ್ಮ ಸುರಕ್ಷತೆ ಅಲ್ಲದೇ ಸುತ್ತಮುತ್ತಲಿನ ಜನರ ಆರೋಗ್ಯವು ಮುಖ್ಯವಾಗಿದೆ. ಆದ ಕಾರಣ ಲಸಿಕೆ ಪಡೆಯುವುದು ಉತ್ತಮ. ಈ ರೀತಿ ಕಾರ್ಯಕ್ರಮ ಹಮ್ಮಿಕೊಂಡಂತಹ ಮನುವಿಕಾಸ ಸಂಸ್ಥೆ ಹಾಗೂ ಸಹಾಯ ನೀಡಿದಂತಹ ಅಜಿಂ ಪ್ರೇಮ್‌ಜಿ ಫೌಂಡೇಶನ್ ಅವರಿಗೆ ಧನ್ಯವಾದ ತಿಳಿಸಿದರು.

30ಕ್ಕೂ ಹೆಚ್ಚು ಸ್ವಯಂ ಸೇವಕರು ಕಾರ್ಯಾಗಾರದಲ್ಲಿ ತರಬೇತಿಯನ್ನು ಪಡೆದುಕೊಂಡರು. ಕಾರ್ಯಾಗಾರದಲ್ಲಿ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಪವನ ಬೊಮ್ಮನಹಳ್ಳಿ, ಶ್ರೀಕಾಂತ್ ಹೆಗಡೆ, ನಿರಂಜನ ಕದಂ ಮತ್ತು ಗೀತಾ ನಿಲೇಕಣಿ ಉಪಸ್ಥಿತರಿದ್ದರು

# ಮನುವಿಕಾಸದಿಂದ ಅಗತ್ಯ ದಿನಸಿ ಆಹಾರ ಸಾಮಗ್ರಿಗಳ ಹಂಚಿಕೆ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಗಿವ್ ಇಂಡಿಯಾ ಸ್ವಯಂ ಸೇವಾ ಸಂಸ್ಥೆಯ ಸಹಯೋಗದೊಂದಿಗೆ ಬಡವರಿಗೆ, ನಿರ್ಗತಿಕರಿಗೆ, ಅಂಗವಿಕಲರಿಗೆ ಅಗತ್ಯ ವಸ್ತುಗಳ ಕಿಟ್‌ನ್ನು ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ ಮತ್ತು ಹಾನಗಲ್ ತಾಲೂಕಿನ ಹಲವಾರು ಗ್ರಾಮಗಳಿಗೆ ವಿತರಿಸಿದೆ.

ಹೆಚ್ಚು ಮೊತ್ತದ ದಿನಸಿ ಕಿಟ್‌ನಲ್ಲಿ ದಿನ ಬಳಕೆಗೆ ಅವಶ್ಯಕವಾದ ತೊಗರಿ ಬೇಳೆ, ಮೆಣಸಿನ ಪುಡಿ, ಉಪ್ಪು, ಅರಿಶಿನ ಪುಡಿ, ಬೆಲ್ಲ, ಸಕ್ಕರೆ, ರಾಗಿ ಹಿಟ್ಟು, ಶೇಂಗಾ, ಟೂತ್ ಪೇಸ್ಟ್, ಸೋಪು, ಸ್ಯಾನಿಟೈಸರ್, ಎಣ್ಣೆ, ಬಟ್ಟೆ ಸೋಪು, ರವಾ, ಸಾಂಬಾರ್ ಪೌಡರ್, ಗ್ಲುಕೋಸ್ ಬಿಸ್ಕೇಟ್, ಹಾಲಿನ ಪುಡಿಯನ್ನು ಉಚಿತವಾಗಿ ವಿತರಿಸಿದೆ. 200ಕ್ಕೂ ಹೆಚ್ಚು ಬಡವರಿಗೆ ಇದರಿಂದ ಸಹಾಯವಾಗಿದೆ.









# ಮನುವಿಕಾಸದಿಂದ ಜಲ ಮತ್ತು ಪರಿಸರ ಅಧ್ಯಯನ ಕೇಂದ್ರದ ಪ್ರಾರಂಭ



ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಹನ್ಸ್ ಸಿಡಲ್ ಫೌಂಡೇಶನ್, ಇಂಡಿಯಾದ ಸಹಯೋಗದೊಂದಿಗೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಕರ್ಜಗಿ ಗ್ರಾಮದಲ್ಲಿ ಪರಿಸರ ಸ್ನೇಹಿ ಕಲಿಕಾ ಕೇಂದ್ರವನ್ನು ಪ್ರಾರಂಭಿಸುತ್ತಿದೆ.

ಕರ್ಜಗಿ ಗ್ರಾಮ ಒಂದು ಜೀವವೈವಿಧ್ಯತೆಯ ತಾಣವಾಗಿದ್ದು. ಅನೇಕ ಪ್ರಭೇದ ಸಸ್ಯ ಮತ್ತು ಪ್ರಾಣಿ ಸಂಕುಲಗಳ ಆಶ್ರಯ ತಾಣವೂ ಹೌದು. ಕಲಿಕಾ ಕೇಂದ್ರದಲ್ಲಿ ಸುಸಜ್ಜಿತ ವಸತಿ ವ್ಯವಸ್ಥೆ, ಗ್ರಂಥಾಲಯ, ತರಬೇತಿ ಕೊಠಡಿಗಳು ಮತ್ತು ಆಧುನಿಕ ಉಪಕರಣಗಳು ಕಲಿಕಾ ಸಾಮಗ್ರಿಗಳು ಒಂದೇ ಸೂರಿನ ಅಡಿಯಲ್ಲಿ ಲಭ್ಯವಿದೆ. ನಿಸರ್ಗದ ಮಡಿಲಿನಲ್ಲಿ ತರಬೇತಿಗಳು ಮತ್ತು ಕಲಿಕೆಯನ್ನು ಕಲಿಯಲು ಬಯಸುವ ಅನೇಕ ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳಿಗೆ ಇದು ಒಂದು ವೇದಿಕೆನ್ನು ಕಲ್ಪಿಸಿದೆ. ಅಧ್ಯಯನವನ್ನು ಅರಸಿ ಬರುವ ಶಿಬಿರಾರ್ಥಿಗಳಿಗೆ ಸೂಕ್ತ ಸ್ಥಳಾವಕಾಶದ ಜೊತೆಗೆ ಅನುಕೂಲ ವಾತಾವರಣವನ್ನೂ ಕಲಿಕಾ ಕೇಂದ್ರ ಒದಗಿಸಿಕೊಟ್ಟಿದೆ.



ಕಲಿಕಾ ಕೇಂದ್ರದಲ್ಲಿ ಎರೆಹುಳು ಗೊಬ್ಬರ ತಯಾರಿಕೆ, ಸಾವಯವ ಗೊಬ್ಬರದ ತಯಾರಿಕೆ ಮತ್ತು ಗೋಬರ್ ಅನಿಲದ ಮಾದರಿಗಳು ವೀಕ್ಷಣೆಗೆ ಲಭ್ಯವಿದೆ. ಕೃಷಿ ಹೊಂಡ, ಹನಿ ನೀರಾವರಿ ಪದ್ಧತಿ ಮೊದಲಾದ ಪ್ರಯೋಗಗಳನ್ನು ಪ್ರಾತ್ಯಕ್ಷಿಕ ವಾಗಿ ನೋಡಬಹುದಾಗಿದೆ.



## ಮನುವಿಕಾಸದಿಂದ ಕೋವಿಡ್ ಲಸಿಕಾ ಅಭಿಯಾನಕ್ಕೆ ಉಚಿತ ವಾಹನಗಳ ವ್ಯವಸ್ಥೆ

ಮನುವಿಕಾಸ ಸಂಸ್ಥೆಯು ಅಜೀಂ ಪ್ರೇಮ್ ಜಿ ಫೌಂಡೇಶನ್ನಿನ ಸಹಯೋಗದಲ್ಲಿ ಕೋವಿಡ್ ಲಸಿಕಾ ಅಭಿಯಾನಕ್ಕೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ, ಯಲ್ಲಾಪುರ ಹಳಿಯಾಳ, ಜೋಯಿಡಾ, ಮತ್ತು ಅಂಕೋಲಾ ತಾಲೂಕುಗಳಲ್ಲಿ ಉಚಿತ ವಾಹನ ವ್ಯವಸ್ಥೆಯನ್ನು ಕಲ್ಪಿಸಿದೆ. ಕೋವಿಡ್ ಲಸಿಕೆ ಹಾಕಿಸಿಕೊಳ್ಳಲು ಸಾಧ್ಯವಾಗದ ಮತ್ತು ದುರ್ಗಮ ಪ್ರದೇಶಗಳ ಜನರಿಗೆ ಇದು ಅನುಕೂಲವನ್ನು ಮಾಡಿಕೊಟ್ಟಿದೆ.



ಅಲ್ಲದೆ 30ಕ್ಕೂ ಹೆಚ್ಚು ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಡಿಯಲ್ಲಿ ಜಿಲ್ಲೆಯ ಎಲ್ಲ ಆಯ್ದ ತಾಲೂಕುಗಳಲ್ಲಿ ಸಮುದಾಯ ಆರೋಗ್ಯ ಅಧಿಕಾರಿಗಳು ಮತ್ತು ಕ್ಷೇತ್ರ ಮಟ್ಟದಲ್ಲಿ ಸ್ವಯಂ ಸೇವಕರನ್ನು ನೇಮಕ ಮಾಡಿದೆ ಅದರ ಜೊತೆಗೆ ಅವರಿಗೆ ಸೂಕ್ತ ತರಬೇತಿಗಳನ್ನು ಸಹ ನೀಡಿದೆ. ಕೊರೋನಾ ಲಸಿಕೆಯ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಪ್ರತಿಯೊಬ್ಬರೂ ತಪ್ಪದೇ ತಮ್ಮ ಜವಾಬ್ದಾರಿ ಎಂದು ತಿಳಿದು ಲಸಿಕೆ ಪಡೆದುಕೊಳ್ಳಲು ಮನವೊಲಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ



ಒಟ್ಟಾರೆ ಮೂರು ತಿಂಗಳಿನ ಅವಧಿಯಲ್ಲಿ 55 ಸಾವಿರಕ್ಕೂ ಹೆಚ್ಚಿನ ಜನರಿಗೆ ಇದರ ಲಾಭವನ್ನು ತಲುಪಿಸುವ ಗುರಿಯನ್ನು ಸಂಸ್ಥೆ ಹೊಂದಿದೆ.

## ಮನುವಿಕಾಸದಿಂದ ನಿರ್ಮಿತ ಸಣ್ಣ ಕೃಷಿ ಹೊಂಡಗಳು ರೈತರಲ್ಲಿ ನೀಗಿದ ನೀರಿನ ಆತಂಕಗಳು

ನೈಸರ್ಗಿಕ ಸಂಪನ್ಮೂಲಗಳ ಸಮರ್ಪಕ ಉಪಯೋಗ ಮತ್ತು ರೈತ ಸಮುದಾಯದ ಏಳಿಗೆಗಾಗಿ ಮನುವಿಕಾಸ ಸಂಸ್ಥೆಯು ಗೀವ್ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ 2021–22ರಲ್ಲಿ 35 ಕ್ಕೂ ಹೆಚ್ಚು ಸಣ್ಣ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಿದೆ.



ಇದರಲ್ಲಿ ರೈತರು ತಮ್ಮ ಹೊಲಗಳಿಗೆ ನೀರಿನ ಆಕರಗಳನ್ನು ಬಳಸಿಕೊಳ್ಳುವದರ ಜೊತೆಗೆ ಕುಡಿಯಲು ಯೋಗ್ಯವಾದ ನೀರನ್ನು ಪಡೆಯುತ್ತಿದ್ದಾರೆ.

ಈ ಸಣ್ಣ ಕೃಷಿ ಹೊಂಡಗಳು ತಲಾ 30 ಅಡಿ ಉದ್ದ ಮತ್ತು ಅಗಲವನ್ನು ಹೊಂದಿದ್ದು 10 ಅಡಿ ಆಳವನ್ನು ಹೊಂದಿವೆ. ಮನುವಿಕಾಸದ ಅಧ್ಯಯನದ ಪ್ರಕಾರ ಒಂದು ಕೃಷಿ ಹೊಂಡ ಮೂರು ಜನ ರೈತರಿಗೆ ಸಹಾಯಕವಾಗಬಲ್ಲದು.



ರೈತರಿಗೆ ತಾವು ಬೆಳೆಯುವ ಬೆಳೆಗಳಿಗೆ ನೀರನ್ನು ಒದಗಿಸುವುದರ ಜೊತೆಗೆ ಬೇಸಿಗೆಯ ಸಮಯದಲ್ಲಿ ಕೂಡ ನೀರಿನ ಆಕರಕ್ಕಾಗಿ ಬೇರೆ ಮೂಲಗಳನ್ನು ಅವಲಂಬಿಸುವ ಅನಿವಾರ್ಯತೆಯನ್ನು ಈ ಸಣ್ಣ ಕೃಷಿ ಹೊಂಡಗಳು ತಪ್ಪಿಸಿವೆ

**ಮನುವಿಕಾಸ ಸಂಸ್ಥೆ ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಪ್ರತಿ ತಾಲೂಕಿಗೆ ಸಂಬಂಧಿತ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ.**

| | | |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ-ಸಹಾಯ ಸಂಘಗಳ ನಿರ್ವಹಣೆ) | 94494 53774 |
| | ಮಣಿಕಂಠ ಚಲವಾದಿ (ಕೆರೆ ಅಭಿವೃದ್ಧಿ ಮತ್ತು ಸ್ವ-ಸಹಾಯ ಸಂಘಗಳ ನಿರ್ವಹಣೆ) | 88615 10625 |
| | ಗಣಪತಿ ಗಾಮದ್ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 91132 59935 |
| | ಶೇಖರ ನಾಯ್ಕ್ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 77952 28417 |
| | ಶ್ರೀಕಾಂತ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ -ಸಹಾಯ ಸಂಘಗಳ ನಿರ್ವಹಣೆ) | 94495 24860 |
| | ಅಶ್ವತ್ಥ್ ನಾಯ್ಕ್ (ಕೆರೆ ಅಭಿವೃದ್ಧಿ ಮತ್ತು ಸ್ವ -ಸಹಾಯ ಸಂಘಗಳ ನಿರ್ವಹಣೆ) | 99011 82957 |
| ಸಿದ್ದಾಪುರ | ಪುನೀತ್ ನಾಯ್ಕ್ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 96862 24908 |
| ಸೊರಬ | ರವಿ ಗೌಡ (ಸ್ವ-ಸಹಾಯ ಸಂಘಗಳ ನಿರ್ವಹಣೆ) | 97407 48932 |
| ಹಳಿಯಾಳ | ಮಂಜುನಾಥ ತೊರಲೆಕರ (ಕೆರೆ ಅಭಿವೃದ್ಧಿ ಮತ್ತು ಸ್ವ-ಸಹಾಯ ಸಂಘಗಳ ನಿರ್ವಹಣೆ) | 95389 56554 |
| ಯಲ್ಲಾಪುರ | ರಾಘವೇಂದ್ರ ಭಟ್ಟ ( ಕೆರೆ ಅಭಿವೃದ್ಧಿ ಮತ್ತು ಸ್ವ- ಸಹಾಯ ಸಂಘಗಳ ನಿರ್ವಹಣೆ | 94484 24374 |
| ಮುಂಡಗೋಡ | ಬಸವರಾಜ ರಡ್ಡೇರ (ಕೆರೆ ಅಭಿವೃದ್ಧಿ ಮತ್ತು ಸ್ವ-ಸಹಾಯ ಸಂಘಗಳ ನಿರ್ವಹಣೆ) | 80953 11643 |
| ಹಾನಗಲ್ | ಗಣಪತಿ ಯಲಿವಾಳ (ಕೆರೆ ಅಭಿವೃದ್ಧಿ ಮತ್ತು ಸ್ವ-ಸಹಾಯ ಸಂಘಗಳ ನಿರ್ವಹಣೆ) | 99802 05013 |
| ಅಂಕೋಲಾ | ಮಹೇಶ ನಾಯ್ಕ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 82770 02750 |
| ಕುಮಟಾ | ರಮೇಶ ನಾಯ್ಕ (ಸ್ವ-ಸಹಾಯ ಸಂಘಗಳ ನಿರ್ವಹಣೆ) | 99026 24877 |
| ಕಾರವಾರ | ಗೋಪಾಲ ಬಾಡಕರ (ಸ್ವ- ಸಹಾಯ ಸಂಘಗಳ ನಿರ್ವಹಣೆ) | 94810 83453 |
| ದಾಂಡೇಲಿ | ನಿರಂಜನ್ ಕದಂ (ಸ್ವ-ಸಹಾಯ ಸಂಘಗಳ ನಿರ್ವಹಣೆ) | 72596 89630 |
| ಕಲಘಟಗಿ | ಸಂಜಯ ಲಮಾಣಿ (ಸ್ವ-ಸಹಾಯ ಸಂಘಗಳ ನಿರ್ವಹಣೆ) | 7411383851 |

## ಮನುವಿಕಾಸ ಸಂಸ್ಥೆಗೆ ಆರ್ಥಿಕ ಸಹಕಾರ ನೀಡುತ್ತಿರುವ ಸರಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳು

EdelGive Foundation – An Edelweiss Initiative | Deshpande Foundation | Anandana – Coca-Cola India Foundation | SGP – The GEF Small Grants Programme, gef

GiveIndia – the power to change lives | HDB Financial Services | NABARD | YES Foundation

Azim Premji Philanthropic Initiatives | Vatsikuti India Foundation | CMS | dalyan | 25 Hanns Seidel Foundation India

## ನಿಮ್ಮ ದೂರು ಮತ್ತು ಸಲಹೆಗಳಿಗೆ ಮನುವಿಕಾಸದ ಪ್ರಧಾನ ಕಛೇರಿಯನ್ನು ಸಂಪರ್ಕಿಸಿರಿ

ಮನುವಿಕಾಸ ಸಂಸ್ಥೆಯ ಸಂಪರ್ಕವಿಳಾಸ

MANUVIKASA

**MANUVIKASA**

'MANGESH MAHALAXMI' BUILDING

Rayarpeth, Behind Anjaneya Temple, Vijayanagar,Sirsi Cell: **9845982552**

**www.manuvikasaindia.org http://facebook.com/manuvikasa.karjagi**

**Email : manuvikasa@gmail.com**

Multi Offset, SIRSI 9449453234